ಜನಶಕ್ತಿ

ಸಂಪುಟ 6 ಸಂಚಿಕೆ 4

೨೪—೧೧—೧೯೫೭


★

ಪ್ರಗತಿಶೀಲ ಕನ್ನಡ ವಾರಪತ್ರಿಕೆ

ಪುಟ ೧೦ ಬೆಲೆ: ೧೩ ನ. ಪೈಸೆ

ಕರ್ನಾಟಕ ಪ್ರಾಂತ ರೈತ ಸಮ್ಮೇಳನಾಧ್ಯಕ್ಷರ ಕರೆ

ಕರ್ನಾಟಕ ಪ್ರಾಂತ ಪ್ರಥಮ ರೈತ ಸಮ್ಮೇಳನ ನವೆಂಬರ್ 16ನೇ ತಾರೀಖಿನ ಬೆಳಗ್ಗೆ 11 ಘಂಟೆಗೆ ಬೆಂಗಳೂರು ದೇವಾಂಗ ಸಂಘ ಛತ್ರದಲ್ಲಿ ಆರಂಭವಾಯಿತು. ದಕ್ಷಿಣ ಕನ್ನಡ ಜಿಲ್ಲಾ ರೈತ ಸಂಘದ ಅಧ್ಯಕ್ಷ ಶ್ರೀ ಎ. ಕೃಷ್ಣಶೆಟ್ಟಿ ಅವರು ಕಿಸಾನ ಸಭೆಯ ಬಾವುಟವನ್ನು ಅರಳಿಸಿದರು. ಪ್ರಾಂತ ರೈತ ಸಂಘಟನಾ ಸಮಿತಿಯ ಸದಸ್ಯಶ್ರೀ ಎರ್.ಎಲ್. ಉಪಾಧ್ಯಾಯರು ಸಮ್ಮೇಳನವನ್ನು ಉದ್ಘಾಟನೆಮಾಡುತ್ತ ಕರ್ನಾಟಕದ ರೈತ ಚಳುವಳಿಯ ಪ್ರಗತಿಯನ್ನು ವಿವರಿಸಿ, ಬಲವಾದ ರೈತ ಸಂಘಟನೆಯನ್ನು ಕಟ್ಟುವ ಅವಶ್ಯಕತೆಯನ್ನು ಒತ್ತಿ ಹೇಳಿದರು. ಸಂಚಾಲಕ ಶ್ರೀ ಬಿ. ವಿ. ಕಕ್ಕಿಲ್ಲಾಯರು ಪ್ರತಿನಿಧಿಗಳನ್ನೂ ಅಧ್ಯಕ್ಷರಾದ ಅಖಿಲ ಭಾರತ ಕಿಸಾನ ಸಭೆಯ ಪ್ರಧಾನ ಕಾರ್ಯದರ್ಶಿ ಶ್ರೀ ಎನ್. ಪ್ರಸಾದರಾಯರನ್ನೂ ಅತಿಥಿಗಳನ್ನೂ ಸ್ವಾಗತಿಸಿ, ಕರ್ನಾಟಕದ ವ್ಯಾವಸಾಯ ಪರಿಸ್ಥಿತಿಯನ್ನು ವಿವರಿಸಿದರು; ಮೈಸೂರು ಸರಕಾರವು ಭೂಸುಧಾರಣೆಯ ವಿಚಾರದಲ್ಲಿ ಪ್ರತಿಗಾಮಿ ಧೋರಣೆಯನ್ನು ಅನುಸರಿಸುತ್ತಿರುವುದನ್ನು ವಿಮರ್ಶಿದರು; ಜತ್ತಿ ಸಮಿತಿಯ ವರದಿಯಲ್ಲಿ ರೈತರಿಗೆ ಬಾಧಕವಾಗುವ ಅಂಶಗಳನ್ನು ಎತ್ತಿ ತೋರಿಸಿ ಅವುಗಳನ್ನು ಸರಿಪಡಿಸಿ ಯೋಗ್ಯ ಭೂಸುಧಾರಣೆಯ ಬಗ್ಗೆ ಚಳುವಳಿ ನಡೆಸುವ ಅವಶ್ಯಕತೆಯನ್ನು ತಿಳಿಸಿದರು.



ಓರ್ವ ವಯೋವೃದ್ಧ ಪ್ರತಿನಿಧಿ

ಅಧ್ಯಕ್ಷರು ತಮ್ಮ ಭಾಷಣದಲ್ಲಿ :—

ಕರ್ನಾಟಕವು ನಾನಾ ರಾಜ್ಯಗಳಲ್ಲಿ ಹಂಚಿಕೆಯಾಗಿದ್ದುದರಿಂದ ಸಮಗ್ರವಾದ ಒಂದು ರೈತ ಸಂಘಟನೆ ಸಾಧ್ಯವಾಗಿರಲಿಲ್ಲವೆಂದೂ ಈಗ ಒಂದೇ ಆಡಳಿತವಿರುವುದರಿಂದ ಸಂಘಟನೆ ಸಾಧ್ಯವಾಗಿದ್ದು ಇಂದಿನ ಸಭೆ ಶುಭಸೂಚಕವಾಗಿದೆಯೆಂದೂ ತಿಳಿಸಿದರು.

ಕರ್ನಾಟಕ ರೈತರ ಸಮಸ್ಯೆಯನ್ನು ಚರ್ಚಿಸಿ ಪರಿಹಾರ ಕಂಡುಹಿಡಿಯುವುದು ಪ್ರಕೃತ ಸಮ್ಮೇಳನಕ್ಕೆ ಸೇರಿದ್ದೆಂದೂ ಆದರೆ ಇಡೀ ರಾಷ್ಟ್ರದ ರೈತರ ಸಮಸ್ಯೆ ಏನೆಂಬುದನ್ನು ತಾವು ಪ್ರಸ್ತಾಪಿಸುವುದಾಗಿಯೂ ಅದರ ಹಿನ್ನೆಲೆಯಲ್ಲಿ ಕರ್ನಾಟಕ ರೈತರ ಸಮಸ್ಯೆಯನ್ನು ಚರ್ಚಿಸುವುದು ಸೂಕ್ತವೆಂದೂ ತಿಳಿಸಿದರು.

ನ್ಯೂನತೆಯಿಲ್ಲದ ಪ್ರಗತಿಶೀಲ ಭೂಶಾಸನ ಆಗಲಿ

ಸಮ್ಮೇಳನದ ಅಧ್ಯಕ್ಷ ಶ್ರೀ ಎನ್. ಪ್ರಸಾದರಾಯರು ಮಾತನಾಡುತ್ತ ಸರ್ಕಾರದ ಭೂಶಾಸನಗಳ ಪರಿಣಾಮಗಳನ್ನು ವಿವರಿಸಿ ನ್ಯೂನತೆಯಿಲ್ಲದ ಪ್ರಗತಿಶೀಲ ಭೂಶಾಸನವಾಗತಕ್ಕದೆಂದು ಹೇಳಿದರು.

ಸಾಮಾನ್ಯವಾಗಿ ಭಾರತದ ರೈತರು ಎದುರಿಸುತ್ತಿರುವ ಸಮಸ್ಯೆಗಳನ್ನು ಪ್ರಸ್ತಾಪಿಸುತ್ತಾ ಶ್ರೀ ರಾವ್‌ರವರು "ಇಡೀ ರಾಷ್ಟ್ರದ ಆರ್ಥಿಕ ವ್ಯವಸ್ಥೆ ಉತ್ತಮಗೊಳ್ಳುವುದರಲ್ಲಿ ರೈತರ ಪಾತ್ರವೇನೆಂಬುದನ್ನು ಚರ್ಚಿಸಬೇಕಾಗಿದೆ. ನಮ್ಮ ರಾಷ್ಟ್ರ ಶೇ. ಎಪ್ಪತ್ತು ಮಂದಿ ವ್ಯವಸಾಯವನ್ನವಲಂಬಿಸಿರುವುದರಿಂದ ಮತ್ತು ಸರಕಾರದ ಆದಾಯದಲ್ಲಿ ಶೇ. ೪೦ ಭಾಗ ಬೇಸಾಯದ ಮೂಲಕ ಬರುವುದರಿಂದ ಬೇಸಾಯ ಉತ್ತಮವಾಗದೆ ನಮ್ಮ ರಾಷ್ಟ್ರದ ಪುನರ್ನಿರ್ಮಾಣ ಸಾಧ್ಯವಾಗುವುದಿಲ್ಲ" ಎಂದರು.

"ಪೂರ್ಣ ಕಾಲದ ಕೆಲಸವಿಲ್ಲದ ಕೃಷಿ ಕಾರ್ಮಿಕರು ಮತ್ತು ಐದು ಎಕರೆಗೂ ಕಡಿಮೆ ಜಮೀನಿರುವ ಭೂಮಾಲಿಕರು ವರ್ಷದ ಬಹುಭಾಗವನ್ನು ಕೆಲಸವಿಲ್ಲದೆ ಕಳೆಯುತ್ತಿದ್ದು ನಮ್ಮ ಮನುಷ್ಯಶಕ್ತಿ ವ್ಯರ್ಥವಾಗುತ್ತಿದೆ. ಲಕ್ಷಾಂತರ ಎಕರೆ ಜಮೀನು ವ್ಯವಸಾಯ ಯೋಗ್ಯವಾಗಿದ್ದರೂ ವ್ಯವಸಾಯಕ್ಕೆ ಅನುಕೂಲಗಳಿಲ್ಲದೆ ವ್ಯವಸಾಯ ನಡೆಯುತ್ತಿಲ್ಲ. ಇದರಿಂದ ಆಹಾರ ಉತ್ಪನ್ನಕ್ಕೆ ಧಕ್ಕೆಯುಂಟಾಗುತ್ತಿದೆ" ಎಂದು ಹೇಳಿ "ನಮ್ಮ ವ್ಯವಸಾಯ ಬಹು ಹಿಂದೆ ಉಳಿದಿದೆ. ಆದುದರಿಂದಲೇ ಸ್ವಾತಂತ್ರ್ಯ ಬಂದು ಹತ್ತು ವರ್ಷವಾದರೂ ದೇಶ ಆಹಾರ ಅಭಾವವನ್ನೆದುರಿಸುತ್ತಿದೆ" ಎಂದರು.

ಆಹಾರ ಉತ್ಪನ್ನ ಹೆಚ್ಚಬೇಕಾದರೆ ಭೂಸಮಸ್ಯೆ ಪರಿಹಾರವಾಗಬೇಕಾದ್ದು ಅನಿವಾರ್ಯವೆಂದೂ ಭೂಮಿಯ ಒಡೆತನ ಕೆಲವರ ಕೈಯಲ್ಲಿಯೇ ಕೇಂದ್ರೀಕೃತವಾಗಿರುವುದು ಹೋಗಬೇಕೆಂದೂ ಜಮೀನು ಹಂಚಲ್ಪಟ್ಟ ಹೊರತು ರಾಷ್ಟ್ರದ ಕೃಷಿ ಸಮಸ್ಯೆ ಪರಿಹಾರವಾಗುವುದಿಲ್ಲವೆಂಬುದು ಸ್ಪಷ್ಟವಾಗಿದೆಯೆಂದೂ ತಿಳಿಸಿದರು.

"ರೈತರು ಹೊತ್ತಿರುವ ಸಾಲ, ತೆರಿಗೆ ಭಾರ, ಮಧ್ಯವರ್ತಿ ಜನರಿಂದ ಶೋಷಣೆ" ಈ ಅಂಶಗಳು ರೈತರು ಜಮೀನನ್ನು ಉತ್ತಮಪಡಿಸುವುದಕ್ಕೆ ಬಂಡವಾಳ ಹಾಕಲು ಅಡ್ಡಿಯಾಗಿವೆಯೆಂದು ಶ್ರೀ ಪ್ರಸಾದ್ ರಾವ್‌ರವರು, ಈ ಆತಂಕಗಳನ್ನು ನಿರ್ಮೂಲ ಮಾಡಬೇಕೆಂದು ಕಿಸಾನ್ ಸಭೆ ಆಗಾಗ್ಗೆ ಸರಕಾರವನ್ನು ಒತ್ತಾಯಪಡಿಸುತ್ತಿದ್ದು, ಆಹಾರ ಉತ್ಪನ್ನ ಹೆಚ್ಚಿಸುವುದರಲ್ಲಿ ಸಹಕರಿಸಲು ಕಿಸಾನ್ ಸಭಾ ಸದಾ ಸಿದ್ಧವಿದೆಯೆಂದರು. ಸರಕಾರ ಭೂಸಮಸ್ಯೆ ಪರಿಹರಿಸುವುದಾಗಿ ಹೇಳುತ್ತಿದ್ದರೂ ಸರಕಾರ ಕೈಗೊಳ್ಳುತ್ತಿರುವ ಶಾಸನಗಳಿಂದ ಪರಿಸ್ಥಿತಿ ಇನ್ನೂ ಹದಗೆಡುತ್ತಿದೆಯೆಂದೂ, ರಾಷ್ಟ್ರದ ಇಡೀ ಆರ್ಥಿಕ ಸ್ಥಿತಿ ಉತ್ತಮವಾಗಬೇಕಾದರೆ ಭೂಸಮಸ್ಯೆಯನ್ನು ಮೊದಲು ಪರಿಹರಿಸಬೇಕಾದ್ದು ಅನಿವಾರ್ಯವೆಂದೂ ತಿಳಿಸಿದರು.

ಭೂ ಹಂಚಿಕೆಗಾಗಿ ನಾನಾ ಪ್ರಾಂತ್ಯ

(ಕೊನೇ ಪುಟ ನೋಡಿ)



ಕಿಸಾನ್ ಸಭಾ ಬಾವುಟವನ್ನು ಶ್ರೀ ಎ. ಕೃಷ್ಣ ಶೆಟ್ಟಿ ಅವರು ಅರಳಿಸುತ್ತಿದ್ದಾರೆ



ಎನ್. ಎಲ್. ಉಪಾಧ್ಯಾಯರು ಸಮ್ಮೇಳನ ಉದ್ಘಾಟನೆ ಮಾಡುತ್ತಿದ್ದಾರೆ ಮಧ್ಯದಲ್ಲಿರುವವರು ಪ್ರಸಾದ್ ರಾವ್ ಅವರು

ಯುದ್ಧ ನಿಷೇಧಿಸಲ್ಪಡಲಿ-ಶಾಂತಿಯುತ ಸಹಜೀವನ ಸ್ಥಿರವಾಗಲಿ!

ನವಂಬರ ಕ್ರಾಂತಿ ದಿನಾಚರಣೆಯ ಮೊದಲ ದಿನ ಸೋವಿಯತ್ ಯೂನಿಯನಿನ ಸುಪ್ರೀಂ ಸೋವಿಯತ್ ಸಭೆಯಲ್ಲಿ 1,300 ಪ್ರತಿನಿಧಿಗಳನ್ನೂ 15,000 ಅತಿಥಿಗಳನ್ನೂ ಉದ್ದೇಶಿಸಿ ಸೋವಿಯತ್ ಕಮ್ಯೂನಿಸ್ಟ್ ಪಕ್ಷದ ಪ್ರಥಮ ಕಾರ್ಯದರ್ಶಿ ನಿಕಿತಾ ಕ್ರುಶ್ಚೇವ್–"ಯುದ್ಧ ನಿಷೇಧಿಸಲ್ಪಡಲಿ, ಶಾಂತಿಯುತ ಸಹಜೀವನ ಸ್ಥಿರವಾಗಲಿ" ಎಂದು ಘೋಷಿಸಿದರು.

ಪ್ರಪಂಚದ ದೊಡ್ಡ ರಾಷ್ಟ್ರಗಳ ನಾಯಕರು ಒಂದೆಡೆಯಲ್ಲಿ ಕಲೆತು, "ಅಂತರ್ ರಾಷ್ಟ್ರೀಯ ವಿವಾದಗಳನ್ನು ಯುದ್ಧಗಳ ಮೂಲಕ ತೀರ್ಮಾನ ಮಾಡುವ ಕ್ರಮವನ್ನು ನಿಷೇಧಿಸುವ, ಶೀತ ಯುದ್ಧವನ್ನು ಕೊನೆಗಾಣಿಸುವ, ಆಯುಧ ಸಂಗ್ರಹದ ಮೇಲಾಟವನ್ನು ನಿಲ್ಲಿಸುವ ಹಾಗು ರಾಷ್ಟ್ರಗಳೆಲ್ಲ ಶಾಂತಿಯುತವಾಗಿ ಸಹಜೀವನ ನಡೆಸುವ ಘೋಷಣೆಯನ್ನು ಮಾಡಲಿ" ಎಂದು ಕ್ರುಶ್ಚೆವ್ ಆಹ್ವಾನವಿತ್ತರು.

ತಾತ್ವಿಕ ಮತಭೇದಗಳನ್ನು ಯುದ್ಧಗಳ ಮೂಲಕ ಬಗೆಹರಿಸುವ ದಾರಿಯನ್ನು ಬಿಟ್ಟು, ಪರಸ್ಪರ ಸ್ಪರ್ಧೆಯ ಮೂಲಕ ಬಗೆಹರಿಸುವ ದಾರಿಯನ್ನು ಅನುಸರಿಸಬೇಕೆಂದು ಅವರು ಸಾರಿದರು. ಮಾನವ ಕುಲದ ಆವಶ್ಯಕತೆಗಳನ್ನು ಹೆಚ್ಚು ಹೆಚ್ಚು ತೃಪ್ತಿಪಡಿಸುವುದಕ್ಕೆ ರಾಷ್ಟ್ರಗಳೊಳಗೆ ಒಪ್ಪಂದವಾಗಬೇಕೆಂದು ಅವರು ವಿನಂತಿಸಿದರು.

ಸೋವಿಯತ್ ಯೂನಿಯನು ಕೃತಕ ಉಪಗ್ರಹಗಳನ್ನು ಯಶಸ್ವಿಯಾಗಿ ಹಾರಿಸಿರುವುದು, ಇದಿರಾಳಿಗಳಲ್ಲಿ ಭೀತಿಯನ್ನೂ ಚಿಂತೆಯನ್ನೂ ಹುಟ್ಟಿಸಿದೆ. ಆದರೆ ಸೋವಿಯತ್ ಯೂನಿಯನು ಶಾಂತಿಯ, ಶಾಂತಿಯುತ ಸಹಜೀವನದ, ಧೋರಣೆಯನ್ನೇ ಅನುಸರಿಸುವುದೆಂದು ಕುಶ್ಚೇವ್ ಸ್ಪಷ್ಟಪಡಿಸಿದರು. ಅಮೆರಿಕವೂ ಕೃತಕ ಉಪಗ್ರಹಗಳನ್ನು ಹಾರಿಸಲಿ; ವಿಶ್ವಾಂತರಾಳದಲ್ಲಿ ವಿವಿಧ ರಾಷ್ಟ್ರಗಳ ಕೃತಕ ಉಪಗ್ರಹಗಳು ಸಮ್ಮೇಳಿಸಿ ಹಾರುತ್ತಿರಲಿ. ಮಾರಕಾಸ್ತ್ರಗಳನ್ನು ಸೃಷ್ಟಿಸುವುದರಲ್ಲಿ ತಾನು ಮೇಲು ತಾನು ಮೇಲೆಂದು ಮತ್ಸರಿಸುವುದಕ್ಕಿಂತ, ಮಾನವ ಕಲ್ಯಾಣದ ಸಲುವಾಗಿ ಪೈಪೋಟಿ ನಡೆಸುವುದು ಒಳ್ಳೆಯದೆಂದು ಕೃಶ್ಚೆವ್ ನುಡಿದರು.

ಸ್ಟಾಲಿನರ ನಾಯಕತ್ವದ ಲೋಪದೋಷಗಳನ್ನು ಸೋವಿಯತ್ ಕಮ್ಯೂನಿಸ್ಟ್ ಪಾರ್ಟಿ ವಿಮರ್ಶಿಸಿದೆ, ನಿಜ. ಆದರೆ ಈ ವಿಮರ್ಶೆಯನ್ನು ಕಮ್ಯೂನಿಸ್ಟ್ ಪಾರ್ಟಿಯ ವಿರೋಧ ಹೋರಾಡುವುದಕ್ಕೆ ಉಪಯೋಗಿಸುವವರಿಗೆ ಸೋವಿಯತ್ ಯೂನಿಯನ್ ಆಸ್ಪದ ಕೊಡಲಾರದು. "ಸ್ಟಾಲಿನ್ನರ ಮೇಲೆ ಕಳಂಕ ಹಚ್ಚಲು ಪ್ರಯತ್ನಿಸುವವರನ್ನು ಪಾರ್ಟಿ ವಿರೋಧಿಸುವುದು ; ಸ್ಟಾಲಿನ್ ಪಾರ್ಟಿಯ ನಾಯಕತ್ವ ವಹಿಸಿದ್ದ ಕಾಲಘಟ್ಟವನ್ನು ನಿಷೇಧಿಸುವುದಕ್ಕೆ ಪಾರ್ಟಿಯು ಅವಕಾಶ ಕೊಡಲಾರದು. ನಮ್ಮ ಜನತೆಯೂ ನಮ್ಮ ಪಾರ್ಟಿಯೂ ಸ್ಟಾಲಿನ್ನರನ್ನು ನೆನಪಿನಲ್ಲಿಟ್ಟುಕೊಳ್ಳುವುವು ; ಅವರಿಗೆ ಸಲ್ಲತಕ್ಕ ಸ್ಥಾನಮಾನಗಳನ್ನು ಅವರಿಗೆ ಕೊಡುವವು" ಎಂದು ಕ್ರುಶ್ಚೆವ್ ವಿವರಿಸಿದರು.

ರಷ್ಯದ ಕಮ್ಯೂನಿಸ್ಟರು ಅಕ್ಟೋಬರ್ ಮಹಾಕ್ರಾಂತಿಯನ್ನು ಕೂಲಿಗಾರ ವರ್ಗದ ಕ್ರಾಂತಿಯನ್ನು ಯಶಸ್ವಿಗೊಳಿಸಿದರು. ಭೂಮಾಲಿಕ-ಬಂಡವಾಳಗಾರ ಪ್ರಭುತ್ವವನ್ನು ಕೊನೆಗಾಣಿಸಿದರು. ಪ್ರತಿಗಾಮಿಗಳ ಪ್ರತಿಭಟನೆಯನ್ನು ಮುರಿದು ಸಮಾಜವಾದಿ ಸಮಾಜವನ್ನು ನಿರ್ಮಿಸಿದರು.

ಸೋವಿಯತ್ ಯೂನಿಯನ್ನಿನ ಮೇಲೆ ಹಿಟ್ಲರ್ ಆಕ್ರಮಣ ನಡೆಸಿದ್ದು ಜಾಗತಿಕ ಸಾಮ್ರಾಜ್ಯಶಾಹಿಯ ಕೈವಾಡದಿಂದ ಸಮಾಜವಾದಿ ರಾಷ್ಟ್ರವನ್ನು ನಾಶ ಮಾಡಬಹುದೆಂದು ಅವರು ಆಶಿಸಿದ್ದರು. ಆದರೆ ಅವರ ಆಸೆ ಮಣ್ಣುಗೂಡಿತು.

ಸಮಾಜವಾದವು ರಾಷ್ಟ್ರೀಯ ಆರ್ಥಿಕ ತಳಹದಿಯನ್ನೇ ಒಡೆದು ಹಾಕುವುದೆಂದು ಬಂಡವಾಳಗಾರರು ಮಾಡುತ್ತಿದ್ದ ಪ್ರಚಾರವನ್ನೆಲ್ಲ ಸೋವಿಯತ್ ಯೂನಿಯನ್ನಿನ ಮಹತ್ಸಾಧನೆಗಳು ಮಣ್ಣುಗೂಡಿಸಿತು. ಕ್ರಾಂತಿಯ ನಂತರ ಸೋವಿಯತ್ ಯೂನಿಯನ್ನಿನ ರಾಷ್ಟ್ರೀಯ ಉತ್ಪಾದನೆಯು 13 ಪಟ್ಟು ಬೆಳೆಯಿತು. ಅದೇ ಸಮಯದಲ್ಲಿ ಅಮೆರಿಕದಲ್ಲಿ ಉತ್ಪಾದನೆಯು 2 ಪಟ್ಟು, ಬ್ರಿಟನ್ನಿನಲ್ಲೂ ಫ್ರಾನ್ಸಿನಲ್ಲೂ 1½ ಪಾಲು ಮಾತ್ರ ಹೆಚ್ಚಾಗಿದೆ.

ಸೋವಿಯತ್ ಯೂನಿಯನ್ನಿನ ನೈಸರ್ಗಿಕ ಸಂಪತ್ತಿನ ಬಲದಿಂದ ಇನ್ನು ಮುಂದೆ ಮತ್ತಷ್ಟು ಅದ್ಭುತ ಪ್ರಗತಿಯನ್ನು ಸಾಧಿಸಲಾಗುವುದು. ಸ್ವಲ್ಪ ಸಮಯದಲ್ಲೇ ಸೋವಿಯತ್ ಯೂನಿಯನ್ ಉತ್ಪಾದನೆಯಲ್ಲಿ ಅತ್ಯಂತ ಮುಂದುವರಿದ ಬಂಡವಾಳಶಾಹಿ ದೇಶಗಳಿಗಿಂತಲೂ ಮುಂದುವರಿಯುವುದು ಖಂಡಿತ.

ಕ್ರುಶ್ಚೆವ್ ಸೋವಿಯತ್ ಯೂನಿಯನ್ ಸಾಧಿಸಿಸುವ ಅದ್ಭುತವಾದ ಪ್ರಗತಿಯನ್ನು ಅಂಕಿ-ಸಂಖ್ಯೆಗಳ ಆಧಾರದಲ್ಲಿ ಸವಿಸ್ತಾರವಾಗಿ ವಿವರಿಸಿದರು.

ಸೋವಿಯತ್ ಯೂನಿಯನ್ನಿನ ವೈಜ್ಞಾನಿಕ ಪ್ರಗತಿಯನ್ನು ವಿವರಿಸುತ್ತ ಕ್ರುಶ್ಚೆವ್, "ನಮ್ಮ ಸ್ವಂತ ಬಲದಿಂದ ಬಗೆಹರಿಸಲಾರದ ವೈಜ್ಞಾನಿಕ ಸಮಸ್ಯೆಯಿಲ್ಲ. ವಿಜ್ಞಾನಿಗಳನ್ನು ತರಬೇತು ಮಾಡುವುದರಲ್ಲಿ ಬಂಡವಾಳಶಾಹಿ ರಾಷ್ಟ್ರಗಳಿಗಿಂತಲೂ ಸೋವಿಯತ್ ಯೂನಿಯನ್ ಮುಂದುವರಿದಿದೆ ಎಂದು ಈಗ ಎಲ್ಲರೂ ಒಪ್ಪುತ್ತಾರೆ" ಎಂದರು.

ಬಂಡವಾಳಶಾಹಿಯ ಅವಶಿಷ್ಟಗಳನ್ನೆಲ್ಲ ತೊಡೆದು ಹಾಕುವವರೆಗೆ ಸೋವಿಯತ್ ಪ್ರಭುತ್ವವು ಬಿರುಸಾಗಿಸಾಗಬೇಕಾಗಿತ್ತು; ಈಗ ಆ ಸ್ಥಿತಿಯಿಲ್ಲ. ಸೋವಿಯತ್ ಪ್ರಭುತ್ವದ ಕ್ರಮವು ಹೆಚ್ಚು ಹೆಚ್ಚು ಉತ್ತಮಗೊಳ್ಳುವುದೆಂದು ಕ್ರುಶ್ಚೆವ್ ಹೇಳಿದರು. ಸೋವಿಯತ್ ಯೂನಿಯನ್ನಿಗೆ ಈಗ ಆಕ್ರಮಣದ ಅಪಾಯವಿರುವುದರಿಂದ ರಕ್ಷಣೆಗೆ ತುಂಬ ಧನ ವ್ಯಯ ಮಾಡಬೇಕಾಗುತ್ತದೆಂದೂ, ಎಲ್ಲ ರಾಷ್ಟ್ರಗಳೂ ಯುದ್ಧದ ಮಾರ್ಗವನ್ನು ತ್ಯಜಿಸಿ ಶಾಂತಿಯುತ ಸಹಜೀವನದ ದಾರಿಯನ್ನು ಅನುಸರಿಸಿದರೆ ಸೋವಿಯತ್ ಯೂನಿಯನ್ ರಕ್ಷಣೆಗೆ ವ್ಯಯ ಮಾಡಬೇಕಾಗುವ ಅಂಶ ಕಡಿಮೆಯಾಗಿ, ಜನಜೀವನದ ಅಭಿವೃದ್ಧಿಗೆ ಇನ್ನಷ್ಟು ಸಂಪತ್ತನ್ನು ವಿನಿಯೋಗಿಸಲು ಸಾಧ್ಯವಾಗುವುದೆಂದು ಕ್ರುಶ್ಚೆವ್ ತಿಳಿಸಿದರು.

ಕರ್ನಾಟಕ ರೈತ ಸಮ್ಮೇಳನದ ನಿರ್ಣಯಗಳು ....

(9ನೇ ಪುಟದಿಂದ)

8. ಒಕ್ಕಲು ಗೇಣಿ ಕೊಟ್ಟಾಗ ಭೂಮಾಲಕನು ರಶೀದಿ ಕೊಡಬೇಕೆಂದು ಕಡ್ಡಾಯ ಮಾಡುವ ನಿಯಮವಿರಬೇಕು. ಗೇಣಿಯನ್ನು ಮನಿಯಾರ್ಡರು ಮೂಲಕ ಅಥವಾ ಕೋರ್ಟಿನ ಮೂಲಕ ಪಾವತಿ ಮಾಡುವುದಕ್ಕೆ ಅವಕಾಶವಿರಬೇಕು.

9. ಈವರೆಗಿನ ಗೇಣಿ ಬಾಕಿಯನ್ನೆಲ್ಲ ರದ್ದುಗೊಳಿಸಬೇಕು. ಮುಂದಿನ ಗೇಣಿ ಬಾಕಿಯನ್ನು ಸಿವಿಲ್ ಸಾಲವೆಂದು ಪರಿಗಣಿಸತಕ್ಕದ್ದು. ಗೇಣಿ ಬಾಕಿಯ ಕಾರಣದಿಂದ ಜಮೀನು ತಪ್ಪಿಸುವುದಕ್ಕೆ ಅವಕಾಶ ಇರಕೂಡದು.

10. ಭೂಮಾಲಕನು ವಾಪಾಸು ಪಡೆಯುವುದಕ್ಕೆ ಅವಕಾಶವಿಲ್ಲದ ಜಮೀನನ್ನು ಒಕ್ಕಲು ಕೊಂಡುಕೊಳ್ಳಲು ಅವಕಾಶವಿರಬೇಕು. ಹಾಗೆ ಕೊಂಡುಕೊಳ್ಳುವಾಗ, ನ್ಯಾಯ ಗೇಣಿಯಿಂದ ಕಂದಾಯವನ್ನು ಕಳೆದು ಉಳಿಯುವ ಭಾಗದ 12 ಪಾಲಿಗಿಂತ ಹೆಚ್ಚಾಗದಷ್ಟು ಭೂಮಾಲಕನಿಗೆ ಪರಿಹಾರ ಕೊಡುವಂತಾಗಬೇಕು.

11. ಒಕ್ಕಲುಗಳ ಹಿಡುವಳಿ ಹಕ್ಕುಗಳ ದಾಖಲೆಗಳನ್ನು ಎಲ್ಲ ಗ್ರಾಮಗಳಲ್ಲಿಯೂ ತಯಾರಿಸಿ ಇಟ್ಟು ಕೊಳ್ಳ ತಕ್ಕದ್ದು. ಸುಳ್ಳು ದಾಖಲೆಗಳನ್ನು ತಯಾರಿಸುವುದು ಶಿಕ್ಷಾರ್ಹವಾಗಿರಬೇಕು. ದಾಖಲೆಗಳನ್ನು ತಿದ್ದುಪಡಿ ಮಾಡಬೇಕೆಂದು ಕೇಳಿದಾಗ ಪರಿಶೀಲನೆ ನಡೆಸಿ ತಿದ್ದುಪಡಿ ಮಾಡುವ ನಿಯಮವಿರಬೇಕು.

ಹಿಡುವಳಿ ಪರಿಮಿತಿ ಮತ್ತು ಭೂ ವಿತರಣೆಗೆ

1. 1952 ರ ನಂತರ ಭೂಮಾಲಿಕರು ಮಾಡಿಕೊಂಡಿರುವ ಜಮೀನಿನ ಮಾರಾಟ, ಪಾಲು ಮತ್ತಿತರ ರೂಪದ ಹಸ್ತಾಂತರಗಳನ್ನು ಹಿಡುವಳಿ ಪರಿಮಿತಿ ನಿರ್ಣಯದ ಮಟ್ಟಿಗೆ ಗಣನೆಗೆ ತೆಗೆದುಕೊಳ್ಳಬಾರದು.

2. ಭೂಮಾಲಿಕರು ಸ್ವಂತ ಸಾಗುವಳಿಗೆ ಇಟ್ಟುಕೊಳ್ಳಬಹುದಾದ ಹಿಡುವಳಿಯ ವಿಸ್ತೀರ್ಣಕ್ಕೆ ಆರು ತಿಂಗಳುಗಳೊಳಗೆ ಪರಿಮಿತಿಯನ್ನು ನಿರ್ಣಯಿಸತಕ್ಕದ್ದು.

3. ಜಮೀನಿನ ಗುಣ, ಬೆಳೆ, ಉತ್ಪತ್ತಿ, ನೀರಾವರಿ ಸೌಕರ್ಯ, ಮಾರ್ಕೆಟಿನ ಸೌಲಭ್ಯತೆ ಮೊದಲಾದವುಗಳನ್ನು ಗಣನೆಗೆ ತೆಗೆದುಕೊಂಡು, ವಿಸ್ತೀರ್ಣದ ಆಧಾರದಲ್ಲಿ ಪರಿಮಿತಿಯನ್ನು ನಿರ್ಣಯಿಸತಕ್ಕದ್ದು.

4. ಪರಿಮಿತಿಯನ್ನು ಈ ಕೆಳಗಿನ ಆಧಾರದಲ್ಲಿ ನಿರ್ಣಯಿಸಬೇಕು.

(*a*) ಬೇಸಾಯಗಾರರಾದ ಭೂಮಾಲಕ (ರೈತ) ರ ಹಿಡುವಳಿಗೆ ಹೆಚ್ಚು ಬಾಧಕವಾಗಬಾರದು ;

(*b*) ಬೇಸಾಯಗಾರರಲ್ಲದ ಭೂಮಾಲಕ (ಜಮೀನ್ದಾರ) ರ ಜಮೀನಿನ ಆದಷ್ಟು ಹೆಚ್ಚಿನ ಭಾಗವು ಜಮೀನಿಲ್ಲದ ಕೃಷಿ ಕೆಲಸಗಾರರಿಗೂ ಬಡ ರೈತರಿಗೂ ಹಂಚುವುದಕ್ಕೆ ಸಿಗಬೇಕು.

5. ಈಗ ಇರುವ ಕಾಫಿ-ಚಾ ತೋಟಗಳ ಹೊರತು ಬೇರೆ ಯಾವ ತರದ ಜಮೀನಿಗಾಗಲಿ ದೇವಾಲಯ ಮತ್ತಿತರ ಧಾರ್ಮಿಕ ಸಂಸ್ಥೆಗಳ ಜಮೀನಿಗಾಗಲಿ ಪರಿಮಿತಿಯಿಂದ ವಿನಾಯತಿ ಇರಬಾರದು. ಇನ್ನು ಮುಂದೆ ಸರಕಾರಿ ಅಥವ ಸಹಕಾರಿ ಒಡೆತನದಲ್ಲಿ ಸ್ಥಾಪಿತವಾಗುವ ಕಾಫಿ-ಚಾ ತೋಟಗಳ ಹೊರತು ಖಾಸಗಿಯಾಗಿ ಸ್ಥಾಪಿತವಾಗುವ ಕಾಫಿ-ಚಾ ತೋಟಗಳಿಗೂ ಪರಿಮಿತಿ ಅನ್ವಯವಾಗಬೇಕು.

6. ವಿತರಣೆ ಮಾಡಲ್ಪಡುವ ಜಮೀನನ್ನು ಪಡೆಯುವವರು ಸರಕಾರಕ್ಕೆ ನ್ಯಾಯಗೇಣಿಯಷ್ಟು ಕಂದಾಯವನ್ನು ಕೊಡುವಂತೆ ನಿರ್ಣಯವಾಗಬೇಕು. ಹಾಗೆ ಸರಕಾರವು ಪಡೆಯುವ ಹಣದಿಂದ ಭೂಮಾಲಿಕರಿಗೆ ಪರಿಹಾರವನ್ನು ಕೊಡಬೇಕಲ್ಲದೆ ಜಮೀನು ಪಡೆಯುವವರ ಮೇಲೆ ಬೇರೆ ಯಾವ ಆರ್ಥಿಕ ಹೊರೆಯನ್ನೂ ಹೊರಿಸತಕ್ಕದ್ದಲ್ಲ. ಸರಕಾರವು ಭೂಮಾಲಿಕರಿಗೆ ಪರಿಹಾರ ಕೊಡುವಾಗ ಸಣ್ಣವರಿಗೆ ಹೆಚ್ಚು ಮತ್ತು ದೊಡ್ಡವರಿಗೆ ಕಡಿಮೆ ದರದಲ್ಲಿ ಕೊಡುವ ಕ್ರಮವನ್ನು ಅನುಸರಿಸಬೇಕು.

7. ಮೇಲೆ ಹೇಳಲಾಗಿರುವ ಆಧಾರದಲ್ಲಿ ಪ್ರಾಂತದ ಬೇರೆ ಬೇರೆ ಪ್ರದೇಶಗಳಲ್ಲಿ ಹಿಡುವಳಿಯ ವಿಸ್ತೀರ್ಣ ಪರಿಮಿತಿಯು ಎಷ್ಟಿರಬೇಕೆಂದು ನಿರ್ದಿಷ್ಟವಾಗಿ ನಿರ್ಣಯಿಸಿ ಸರಕಾರದ ಮುಂದಿಡಲು ಈ ಸಮ್ಮೇಳನವು ಕಾರ್ಯಕಾರಿ ಸಮಿತಿಗೆ ಆದೇಶ ಕೊಡುತ್ತದೆ.

ಸರಕಾರಿ ಬಂಜರು ಜಮೀನಿನ ವಿತರಣೆಗೆ

1. ಸರಕಾರಿ ಬಂಜರು ಭೂಮಿಯಲ್ಲಿ ಈಗಾಗಲೆ ವಾಸ ಮಾಡುವ ಅಥವ ಬೇಸಾಯ ಮಾಡುವ ಜನರಿಗೆ ಆ ಜಮೀನುಗಳ ದರ್ಖಾಸ್ತು ಕೊಡತಕ್ಕದ್ದು.

2. ಸರಕಾರಿ ಬಂಜರು ಭೂಮಿಯನ್ನು, ಅಮೃತ ಮಹಲ್ ಕಾವಲ್‌ನಂಥ ಕಾದಿಟ್ಟ ಸ್ಥಳಗಳನ್ನು ಕೂಡ, ಜಮೀನಿಲ್ಲದ ಕೃಷಿ ಕೆಲಸಗಾರರಿಗೂ ಬಡ ರೈತರಿಗೂ ಉಚಿತವಾಗಿ ಹಂಚಬೇಕು.

●○●

ಭೀಕರ ಆಹಾರ ಪರಿಸ್ಥಿತಿಯು ಮುಂದೆ ಹಲ್ಲು ಕಿರಿಯುವ ಕಾಂಗ್ರೆಸ್ ನಿರ್ಣಯ

ದೇಶದ ಅದ್ಯಂತವಾಗಿ ಆಹಾರದ ಕೊರತೆ ಹಾಗು ಬೆಲೆ ಏರಿಕೆ ತೀವ್ರವಾಗಿದೆ. ಅನೇಕ ಪ್ರದೇಶಗಳಲ್ಲಿ ಬರಗಾಲದ ಪರಿಸ್ಥಿತಿ ತಲೆದೋರಿದೆ. ಇಂಥ ಭೀಕರ ಪರಿಸ್ಥಿತಿಯಲ್ಲಿ ರಾಷ್ಟ್ರದ ಅಧಿಕಾರ ಸೂತ್ರಧಾರ ಕಾಂಗ್ರೆಸ್ ಪಕ್ಷದ ವರಿಷ್ಠ ನೇತೃತ್ವ ಹಾಸ್ಯಾಸ್ಪದವಾದ ನಿರ್ಣಯವೊಂದನ್ನು ಅಂಗೀಕರಿಸಿರುತ್ತದೆ.

ಪತ್ರಿಕಾ ವರದಿಗಳಲ್ಲಿ ಹೇಳಲಾಗಿರುವಂತೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಚರ್ಚೆಯು "ವಿವರವಾಗಿ" ನಡೆದಿದೆ; 1,200 ಪದಗಳ ನಿರ್ಣಯವೂ ಅಂಗೀಕರಿಸಲ್ಪಟ್ಟಿದೆ. ಆದರೆ ಚರ್ಚೆಯು ತುದಿಮೊದಲಿಲ್ಲದ್ದು; ಈ ಉದ್ದದ ಠರಾವಿನಲ್ಲಿ ಅಡಕವಾಗಿರುವ ಸಾರ ಸೊನ್ನೆಯಾಗಿದೆ ಎಂದೇ ಹೇಳಬೇಕಾಗಿದೆ.

"ಸಮೀಪದ ಭವಿಷ್ಯತ್ತಿನಲ್ಲಿ ಆಶಂಕೆಗೆ ಕಾರಣವೇನೂ ಇಲ್ಲ....1958 ರಲ್ಲಿ ಕಷ್ಟದ ಪರಿಸ್ಥಿತಿ ಉಂಟಾಗುವುದನ್ನು ಇದಿರಿಸಲು ಕೇಂದ್ರ, ಪ್ರಾಂತ ಸರಕಾರಗಳೂ ಜನರೂ ತಯಾರು ಮಾಡಿಕೊಂಡಿರಬೇಕು" ಎಂದು ನಿರ್ಣಯದಲ್ಲಿ ಹೇಳಲಾಗಿದೆ.

ಇಂದೇ ಆಹಾರದ ಪರಿಸ್ಥಿತಿಯು ಹದಗೆಟ್ಟಿರುವುದನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಅಲಕ್ಷಿಸಿದೆ, ಮಾತ್ರವಲ್ಲ ಮುಂದೆ ಪರಿಸ್ಥಿತಿಯು ಇನ್ನಷ್ಟು ತೀವ್ರವಾಗುವುದೆಂದು ಒಪ್ಪಿಕೊಂಡನಂತರವೂ ಅದರ ನಿವಾರಣೆಗೆ ಯೋಗ್ಯ ಕಾರ್ಯಕ್ರಮವನ್ನು ವಹಿಸಿರುವುದಿಲ್ಲ.

ಅಖಿಲ ಭಾರತ ಕಿಸಾನ ಸಭೆಯ ಪ್ರಧಾನ ಕಾರ್ಯದರ್ಶಿ ಪ್ರಸಾದರಾವ್ ಅವರು ಪತ್ರಿಕೆಗಳಿಗೆ ಇತ್ತಿರುವ ಒಂದು ಹೇಳಿಕೆಯಲ್ಲಿ ಹೀಗೆ ಹೇಳಿದ್ದಾರೆ: "ಕಮ್ಮಿ ತಿನ್ನಿರಿ ಎಂದುಉಪದೇಶಿಸುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನಿರ್ಣಯವು ಈಗಿನ ಆಹಾರದ ಮುಗ್ಗಟ್ಟನ್ನು ನಿವಾರಿಸಲು ಸಹಾಯಕವಾಗಲಾರದು. ಆ ನಿರ್ಣಯವು ನಿರಾಶೆಯ ಮತ್ತು ಅಸಹಾಯಕತೆಯ ಕೂಗಾಗಿದೆ .... ಆಹಾರ ಉತ್ಪಾದನೆ ಸಾಕಷ್ಟಿಲ್ಲವಾದರೂ, ಈ ವರ್ಷದ ಉತ್ಪಾದನೆಯು ಕಳೆದ ವರ್ಷದ್ದಕ್ಕಿಂತ ಕಮ್ಮಿಯಲ್ಲ. ಆದ್ದರಿಂದ ಈಗಿನ ಆಹಾರದ ಮುಗ್ಗಟ್ಟಿಗೆ ಮುಖ್ಯ ಕಾರಣ, ಉತ್ಪಾದನೆ ಕಡಿಮೆಯಾದುದಲ್ಲ. ಅದಕ್ಕೆ ಮುಖ್ಯ ಕಾರಣ, ಬ್ಯಾಂಕ್ ಮುಂಗಡದ ಬಲದಿಂದ ಆಹಾರ ಧಾನ್ಯಗಳನ್ನು ಸಂಗ್ರಹಿಸಿಡುವ ದಳ್ಳಾಳಿಗಳ ವರ್ತನೆಯಾಗಿದೆ.....

"ಇಂದು ಅನೇಕ ಪ್ರಾಂತಗಳಲ್ಲಿ ಮಳೆ ಬಾರದೆ ಬೆಳೆ ಹಾಳಾಗಿದೆ. ಅದಕ್ಕೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಏನೊಂದು ನಿವಾರಣೆಯನ್ನೂ ಸೂಚಿಸಿರುವುದಿಲ್ಲ ...."

ಇಂದಿನ ಆಹಾರದ ಮುಗ್ಗಟ್ಟೊಂದು ರಾಷ್ಟ್ರೀಯ ವಿಪತ್ತಾಗಿದೆ. ಅದರ ನಿವಾರಣೆಗೆ ವ್ಯವಸಾಯಗಾರರಿಗೆ ವ್ಯವಸಾಯಿಕ ಉತ್ಪಾದನೆಯನ್ನು ಹೆಚ್ಚಿಸುವುದಕ್ಕೆ ಪ್ರೋತ್ಸಾಹ ನೀಡಬೇಕು; ಗುತ್ತಿದಾರ ದಳ್ಳಾಳಿಗಳ ರಾಷ್ಟ್ರಘಾತುಕ ಕೃತ್ಯಗಳನ್ನು ತಡೆಗಟ್ಟಬೇಕು; ಕಮ್ಮಿ ಬೆಲೆಗೆ ಆಹಾರ ಒದಗಿಸುವ ಏರ್ಪಾಡು ಮಾಡಬೇಕು. ಸರಕಾರವು ಈ ಕ್ರಮಗಳನ್ನು ಜನರ ಸಹಕಾರದೊಡನೆ ಕೈಗೊಂಡು ನೆರವೇರಿಸಲಿ.

—✻—

ಪಾರ್ಟಿ ಸದಸ್ಯರ ಗಮನಕ್ಕೆ

ಕರ್ನಾಟಕ ಪ್ರಾಂತ ಪಾರ್ಟಿ ಸಮ್ಮೇಳನವನ್ನು 1958ರ ಜನವರಿ 1 ರಿಂದ3 ರ ತನಕ ಮಂಗಳೂರಿನಲ್ಲಿ ನಡೆಸಬೇಕೆಂದು ಪ್ರಾಂತ ಸಮಿತಿಯು ನಿರ್ಧರಿಸಿದೆ. ಇದಕ್ಕೆ ಯೋಗ್ಯ ವ್ಯವಸ್ಥೆ ಮಾಡಬೇಕೆಂದು ದ. ಕ. ಜಿಲ್ಲಾ ಸಮಿತಿಯನ್ನು ವಿನಂತಿಸಲಾಗಿದೆ.

ಈ ಸಮ್ಮೇಳನಕ್ಕೆ 40 ಪಾರ್ಟಿ ಸದಸ್ಯರಿಗೊಬ್ಬರಂತೆ ಪ್ರತಿನಿಧಿಗಳನ್ನು ಆರಿಸಬೇಕೆಂದು ತೀರ್ಮಾನಿಸಲಾಗಿದೆ. ಈ ಪ್ರತಿನಿಧಿಗಳನ್ನು ಜಿಲ್ಲಾ ಸಮ್ಮೇಳನಗಳಲ್ಲಿ ಆರಿಸತಕ್ಕದ್ದು. ಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಕಳಿಸಲು ಜಿಲ್ಲಾ ಸಮ್ಮೇಳನಗಳನ್ನು ನಡೆಸತಕ್ಕದ್ದು.

ಆದಷ್ಟು ಹೆಚ್ಚು ಸದಸ್ಯರನ್ನು ಪಾರ್ಟಿಗೆ ಸೇರಿಸಬೇಕೆಂದೂ, ಸದಸ್ಯರಿಗೆ ಕಾರ್ಡುಗಳನ್ನು ಕೊಡಬೇಕೆಂದೂ ಪ್ರಾಂತ ಸಮಿತಿಯು ಮಾಡಿದ್ದ ತೀರ್ಮಾನದಂತೆ ಕೆಲವು ಜಿಲ್ಲೆಗಳಲ್ಲಿ ಈ ಕೆಲಸ ನಡೆಯುತ್ತಿದೆ. ಆದರೆ ಕೆಲವು ಯೂನಿಟ್‌ಗಳು ಇದರ ಬಗ್ಗೆ ಗಮನಕೊಟ್ಟಂತೆ ಕಾಣುವುದಿಲ್ಲ. ಈಗಿನ ಪರಿಸ್ಥಿತಿಯಲ್ಲಿ ಪಾರ್ಟಿಗೆ ಸದಸ್ಯರನ್ನು ಸೇರಿಸುವ ವಿಷಯದಲ್ಲಿ ಅಸಡ್ಡೆ ತೋರಿಸುವುದು ಮಹಾ ಅಪರಾಧವೆಂದು ತಿಳಿಯಬೇಕಾಗಿದೆ. ಪ್ರತಿಯೊಂದು ಪಾರ್ಟಿ ಘಟಕವೂ, ಎಲ್ಲಾ ಪಾರ್ಟಿ ಸದಸ್ಯರೂ ಇದಕ್ಕೆ ತೀವ್ರ ಗಮನಕೊಟ್ಟು ಈ ಜವಾಬ್ದಾರಿಯನ್ನು ನಿರ್ವಹಿಸುವರೆಂದು ನಂಬಿದ್ದೇವೆ. ಪಾರ್ಟಿ ಸದಸ್ಯರಿಂದಲೂ, ಸದಸ್ಯರಾಗ ಬಯಸುವವರಿಂದಲೂ ರೂ. 2ನ್ನು (1-8-0 ಚಂದಾ ಮತ್ತು 0-8-0 ಕಾರ್ಡಿಗೆ) ವಸೂಲು ಮಾಡಿ ಅದರಲ್ಲಿ ರೂ. 1-0-0 ನ್ನು (0-8-0 ಚಂದಾ ಮತ್ತು 0-8-0 ಕಾರ್ಡಿನ ಬಾಬ್ತು) ಪ್ರಾಂತ ಸಮಿತಿಗೆ ಕೂಡಲೇ ಕಳಿಸಬೇಕು. ಪಾರ್ಟಿ ಕಾರ್ಡು ಪಡೆಯದಿದ್ದವರನ್ನು ಪಾರ್ಟಿ ಸದಸ್ಯರೆಂದು ಪರಿಗಣಿಸಲಾಗಲಿಕ್ಕಿಲ್ಲವೆಂದು ಎಚ್ಚರಿಸ ಬಯಸುತ್ತೇವೆ.

ಆದ್ದರಿಂದ ಎಲ್ಲ ಪಾರ್ಟಿ ಯೂನಿಟ್‌ಗಳೂ, ಸದಸ್ಯರೂ ಕೂಡಲೇ ಇದನ್ನು ಗಮನಿಸಿ ಪಾರ್ಟಿಯನ್ನು ಬಲಗೊಳಿಸಲು ಕ್ರಮ ತೆಗೆದುಕೊಳ್ಳುವರೆಂದು ಪ್ರಾಂತ ಸಮಿತಿಯು ನಂಬುತ್ತದೆ.

ಭಾರತ ಕಮ್ಯೂನಿಸ್ಟ್ ಪಾರ್ಟಿ
ಕರ್ನಾಟಕ ಪ್ರಾಂತ ಸಮಿತಿ.

ಶಿಕ್ಷಣ ಶುಲ್ಕ ಹೆಚ್ಚುವರಿಯ ವಿರುದ್ಧ ವಿದ್ಯಾರ್ಥಿ ಮುಷ್ಕರ

ಇಷ್ಟರವರೆಗೆ ಸರಕಾರದ ನೇರವಾದ ಆಡಳಿತದಲ್ಲಿದ್ದ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸ್ವಯಮಾಡಳಿತೆಯೊದಗಿದೆ. ಈ ಸ್ವಯಮಾಡಳಿತೆಯಪ್ರಥಮ ಕೊಡುಗೆಯಾಗಿವಿದ್ಯಾರ್ಥಿಗಳಿಗೆ ದೊರೆತ ಲಾಭವೆಂದರೆ ಹೆಚ್ಚಿಸಿದ ವಿದ್ಯಾರ್ಥಿ ಶುಲ್ಕ. ನಾಲ್ಕು ತಿಂಗಳ ಹಿಂದೆ, ವಿದ್ಯಾರ್ಥಿಗಳು ಕಾಲೇಜು ಪ್ರವೇಶಕ್ಕಾಗಿ, ಮಂತ್ರಿಗಳಿಂದ ಹಿಡಿದು ಕಾಲೇಜು ಲೆಕ್ಚರರ್-ಕ್ಲಾರ್ಕುಗಳ ಶಿಫಾರಸಿಗಾಗಿ ಶತಪ್ರಯತ್ನ ನಡೆಸುತ್ತಿರುವಾಗ, ವಿಶ್ವವಿದ್ಯಾನಿಲಯು ಈ ಬಿಕ್ಕಟ್ಟಿನ ಸಂದರ್ಭವನ್ನು ಉಪಯೋಗಿಸಿ, ವಿದ್ಯಾರ್ಥಿಗಳ ಮೇಲೆ ಶಿಕ್ಷಣ ಶುಲ್ಕದ ಹೆಚ್ಚುವರಿಯ ಹೊರೆಯನ್ನು ಹೊರಿಸಿತು. ಇತ್ತ ಪ್ರವೇಶ ಸಿಗಬೇಕು, ಅತ್ತ ಹೆಚ್ಚಿಗೆ ಶುಲ್ಕ ತೆರಲು ಸಾಧ್ಯವಿಲ್ಲ. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಲುಕಿದ್ದ ವಿದ್ಯಾರ್ಥಿ ವರ್ಗ, ವಿಶ್ವವಿದ್ಯಾನಿಲಯದ ಅಧಿಕಾರಿಗಳ ಈ 'ಷೇರ್ ಬರ್ಖಾರ್ ತಂತ್ರ'ದ ವಿರುದ್ಧ ಹೋರಾಡಲು ಅಸಾಧ್ಯವಾಯಿತು. ದಿನ ನಿತ್ಯದ ಬಳಕೆಯ ವಸ್ತುಗಳ ಬೆಲೆಗಳು ಗಗನಕ್ಕೇರುತ್ತಿರುವಾಗ, ಸಂಬಳ ಮಟ್ಟ ಇದ್ದ ಹಾಗೆ ಇರುವಾಗ ಈ ಹೆಚ್ಚಿಸಿದ ಶಿಕ್ಷಣ ಶುಲ್ಕವು ಕೂಡಾ ಒಂದು ಹೊರಲಾರದ ಹೊರೆಯಾಗಿದೆ. ಮಧ್ಯಮ ವರ್ಗದಿಂದಲೇ ವಿದ್ಯಾರ್ಥಿಗಳ ಹೆಚ್ಚಿನ ಸಂಖ್ಯೆಯು ವಿದ್ಯೆ ಪಡೆಯಲು ಮುಂದೆ ಬರುತ್ತಿದ್ದು ಇಂದು ಈ ಮಧ್ಯಮ ವರ್ಗಕ್ಕೆ ಆಘಾತದ ಮೇಲೆ ಆಘಾತವಾಗಿ ತೆರಿಗೆಗಳು ಹೇರಲ್ಪಟ್ಟಿದೆ. ಅವರ ಮಕ್ಕಳಿಗೆ ವಿದ್ಯೆ ನೀಡುವುದೇ ಒಂದು ಅತ್ಯಮೂಲ್ಯ ಭೋಗವಸ್ತು (Luxury)ವಾಗಿದೆಯೆನ್ನಬೇಕು.

ದೇಶದ ಔದ್ಯೋಗೀಕರಣ ಭರದಿಂದ ಸಾಗುತ್ತಿರುವಾಗ, ಯೋಜನೆಯು ಜಾರಿಗೆ ಬರುತ್ತಿರುವಾಗ ಹೆಚ್ಚೆಚ್ಚು ಯಂತ್ರ-ತಾಂತ್ರಿಕಜ್ಞರು, ವಿದ್ಯಾ ಪರಿಣತರು ಬೇಕೆನ್ನುತ್ತಿರುವಾಗ, ಅಧಿಕಾಧಿಕವಾಗಿ ವಿದ್ಯಾಕ್ಷೇತ್ರದಲ್ಲಿ ವಿಸ್ತಾರ ಹಾಗೂ ಸುಧಾರಣೆ ನಡೆಸುವುದನ್ನು ಬಿಟ್ಟು, ವಿದ್ಯಾರ್ಥಿಗಳಿಗೆ ಹೆಚ್ಚೆಚ್ಚಿನ ಸೌಲಭ್ಯ ಹಾಗೂ ಉಚಿತ ಶಿಕ್ಷಣದ ಸವಲತ್ತನ್ನು ಒದಗಿಸುವುದನ್ನು ಬಿಟ್ಟು, ವಿದ್ಯಾರ್ಥಿಗಳು ಕಲಿಯಲು ಮುಂಬರದಂತೆ, ಶಿಕ್ಷಣ ಶುಲ್ಕ ಹೆಚ್ಚಿಸಿರುವುದು ಘೋರವಾದ ಅನ್ಯಾಯವಾಗಿದೆ. ಆದರೆ ನಮ್ಮ ವಿಶ್ವವಿದ್ಯಾನಿಲಯದ ಅಧಿಕಾರಿ ವರ್ಗ ಈ ಬಗ್ಗೆ ಕಣ್ಣು ಮುಚ್ಚಿ, ನಿರ್ವಹಣೆಯಲ್ಲಿ ಖೋತಾ ಬರುವ 4 ಲಕ್ಷ ರೂಪಾಯಿಯ ಹೊರಲಾಗದ ಹೊರೆಯಾಗಿ ವಿದ್ಯಾರ್ಥಿಗಳ ಮೇಲೆ ಹೇರುವ ದುಸ್ಸಾಹಸ ಮಾಡಿದೆ. ತೆರಿಗೆಗಳ ಮೇಲೆ ತೆರಿಗೆ ಹೇರುತ್ತಿರುವ ರಾಜ್ಯ ಸರಕಾರ ಈ ವಿದ್ಯಾ ಶುಲ್ಕದ ಹೆಸರಿನಲ್ಲಿ ಪರೋಕ್ಷ ತೆರಿಗೆಯನ್ನು ವಿಶ್ವವಿದ್ಯಾನಿಲಯ ಮೂಲಕ ಹೇರಿದಂತೆಯೇ ಇದು ಆಗಿದೆ. ಇಲ್ಲವಾದಲ್ಲಿ, ರಾಜ್ಯ ಸರಕಾರವೇ ಈ ಖೋತಾವನ್ನು ತುಂಬಿಸಬಹುದಾಗಿತ್ತು. ಅಥವಾ ಕೇಂದ್ರ ಸರಕಾರವನ್ನು ಕೇಳಬಹುದಾಗಿತ್ತು. 9 ಕೋಟಿ 36 ಲಕ್ಷ ರೂಪಾಯಿ ಖೋತಾ ಬಜೆಟ್ ತಯಾರಿಸಿದ ಸರಕಾರಕ್ಕೆ ಕೇವಲ 4 ಲಕ್ಷ ರೂ. ಹೆಚ್ಚೇನೂ ಆಗಲಾರದು. ಆದರೆ ನಮ್ಮ ರಾಜ್ಯಸರಕಾರಕ್ಕೆ ವಿದ್ಯಾಕ್ಷೇತ್ರದೆಡೆ ಗಮನವೀಯಲು ಪುರಸತ್ತೆಲ್ಲಿದೆ? ಇತ್ತ ವಿಶ್ವವಿದ್ಯಾನಿಲಯದ ಅಧಿಕಾರ ವರ್ಗಕ್ಕೆ ರಾಜ್ಯ ಸರ್ಕಾರವನ್ನು ಕೇಳುವ ವಿವೇಚನೆಯಿಲ್ಲದೆ, ಅಷ್ಟೇ ಅಲ್ಲ, ವಿದ್ಯಾರ್ಥಿಗಳ ಸಮಸ್ಯೆಯತ್ತ ದೃಷ್ಟಿ ಬೀರುವ ಮಾನವೀಯತೆಯೇ ಇಲ್ಲದಂತಾಗಿದೆ.

ವಿಶ್ವವಿದ್ಯಾನಿಲಯದಲ್ಲಿ ವ್ಯಾಪಾರಿ ದೃಷ್ಟಿ ಬೇಡ

ಮಂಡಿಪೇಟೆಯ ವ್ಯಾಪಾರಿಗಳ ಮಾರವಾಡಿ ಧೋರಣೆಯ ಹಾಗೂ ನಮ್ಮ ಸರಕಾರದ ದಬ್ಬಾಳಿಕಾ ನೀತಿಯ ನಿಷ್ಠ ಅನುಯಾಯಿಗಳಾಗಿ ಈ ವಿಶ್ವವಿದ್ಯಾನಿಲಯಾಧಿಕಾರಿಗಳು ಇರುವರಲ್ಲದೆ, ವಿದ್ಯಾಸುಧಾರಣೆಗಾಗಿ ಅಲ್ಲವೆಂದು ಈಗೀಗ ಹೆಚ್ಚೆಚ್ಚಾಗಿ ನಡೆಯುತ್ತಿರುವ ವಿದ್ಯಾರ್ಥಿಗಳ ಪ್ರತಿಭಟನೆ ಮುಷ್ಕರಗಳು, ಪ್ರತಿಬಿಂಬಿಸುತ್ತವೆ. ಈ ಮುಷ್ಕರಗಳನ್ನು ಮುರಿಯುವುದೇ ತಮ್ಮ ಕರ್ತವ್ಯವೆಂದೂ, ಅಗತ್ಯವಿದ್ದಲ್ಲಿ ಸೀಸದ ಗುಂಡು ಹಾರಿಸಿಯೂ, ಅದಲ್ಲವಾದಲ್ಲಿ ಉದ್ದುದ್ದ ಉಪದೇಶಾತ್ಮಕ ಮಾತಿನ ಗುಂಡು ಹಾರಿಸಿಯೂ ಸರಕಾರ ನಡೆದುಕೊಂಡು ಬಂದಿದೆ. "ವಿದ್ಯಾ ಕ್ಷೇತ್ರದಲ್ಲಿ ಕ್ರಾಂತಿಯಾಗಬೇಕು, ಇಂದಿನ ವಿದ್ಯಾರ್ಥಿಗಳು ನವದೇಶದ ನವ ನಿರ್ಮಾಪಕರು" ಎಂದು ಹೇಳುವವರೇ ವಿದ್ಯಾಕ್ಷೇತ್ರದಲ್ಲಿ ತಡೆಯೊಡ್ಡುತಿದ್ದಾರೆ; ಪ್ರತಿಗಾಮಿ ಹೆಜ್ಜೆಯಿಟ್ಟಿದ್ದಾರೆ ಮತ್ತೆ ವಿದ್ಯಾರ್ಥಿಗಳಲ್ಲಿ ಶಿಸ್ತು, ಸಂಯಮವಿಲ್ಲವೆಂದು ಬೈಗುಳ ಉಗುಳುತ್ತಿದ್ದಾರೆ. ಇದೇ ನಾಲಗೆ ಹಿಂದೊಮ್ಮೆ 10 ವರ್ಷಗಳ ಮೊದಲು ವಿದ್ಯಾರ್ಥಿಗಳನ್ನು ಹೋರಾಟಕ್ಕೆಳೆದಿತ್ತು. ಅದು ನ್ಯಾಯವೂ ಆಗಿತ್ತು. ಆದರೆ ಈಗ ....ಈಗ ಹೋರಾಟ ನ್ಯಾಯವಾಗಿರಬಹುದು; ನ್ಯಾಯವಾಗಿದೆ. ಆದರೆ ಅಂದು ವಿದ್ಯಾರ್ಥಿಗಳನ್ನು ಕೂಡಿ ಹೋರಾಡುತ್ತಿದ್ದ, ಇಂದು ಅದೇ ಹೋರಾಟವನ್ನು ಹತ್ತಿಕ್ಕಲು ಮುಂದೆ ಬಂದ ಕಾಂಗ್ರೆಸ್ ಮಾತ್ರ ಬದಲಾಗಿದೆ ಇಂದು ಈ ಸರ್ಕಾರದೊಡನೆವಿದ್ಯಾರ್ಥಿಗಳ ಹೋರಾಟ ನಡೆಸಬೇಕಾಗಿದೆ! ತಮ್ಮ ಸಂಘಟನೆ ಬಲಪಡಿಸಿ ನ್ಯಾಯಕ್ಕಾಗಿ ಹೋರಾಡಬೇಕಾಗಿದೆ.

ರೈತರ ಹಿತಸಾಧಿಸಲು ಸಂಘಟಿತರಾಗಿರಿ ★

ಕಾರ್ಯದರ್ಶಿಯ ಸ್ವಾಗತ ಭಾಷಣ

ಹತ್ತೊಂಭತ್ತು ಜಿಲ್ಲೆಗಳಿರುವ ವಿಶಾಲವಾದ ಕರ್ನಾಟಕ ಪ್ರಾಂತದಲ್ಲಿ ಕೆಲವು ಮುಖ್ಯ ಕೈಗಾರಿಕೆಗಳಿದ್ದರೂ, ಒಟ್ಟಿನಲ್ಲಿ ಔದ್ಯೋಗಿಕವಾಗಿ ಹಿಂದುಳಿದಿದೆ ಎಂದೇ ಹೇಳಬೇಕಾಗಿದೆ. ಒಟ್ಟು ಜನಸಂಖ್ಯೆ ಸುಮಾರು ಎರಡು ಕೋಟಿಯಷ್ಟಿರುವ ಈ ಪ್ರಾಂತದಲ್ಲಿ ಶೇ. 71 ಮಂದಿ ಕೃಷಿಯನ್ನೇ ಅವಲಂಬಿಸಿಕೊಂಡಿದ್ದಾರೆ.

ಸುಮಾರು 2½ಕೋಟಿ ಎಕ್ರೆ ಜಮಿನಿನಲ್ಲಿ ಕೃಷಿಯಾಗುತ್ತದೆ ಅದರೆ ಅದರ ಶೇ. 7ರಷ್ಟು, ಅಂದರೆ ಬರೇ 17ಲಕ್ಷ ಎಕ್ರೆಗಳಿಗ ಮಾತ್ರ ಕಾಲುವೆ, ಬಾವಿ, ಕೆರೆ ಮತ್ತಿತರ ನೀರಾವರಿ ಸೌಕರ್ಯವಿರುವುದು. 45ಲಕ್ಷ ಎಕ್ರೆಯಷ್ಟು ಕೃಷಿಗೆ ಯೋಗ್ಯವಾದ ಜಮೀನು ಬಂಜರಾಗಿ ಉಳಿದಿದೆ. ಇದಲ್ಲದೆ ಹುಲ್ಲುಗಾವಲುಗಳೂ ಕಾಡುಗಳೂ ಬೇರೆ ಇವೆ.

ವ್ಯವಸಾಯವನ್ನು ಹೊಂದಿಕೊಂಡಿರುವವರಲ್ಲಿ ಶೇ. 67ರಷ್ಟು ಸ್ವತಃ ಸಾಗುವಳಿ ಮಾಡುವವರು; ಶೇ. 13ರಷ್ಟು ಬೇರೆಯವರ ಜಮೀನಿನಲ್ಲಿ ಬೇಸಾಯ ಮಾಡುವ ಒಕ್ಕಲುಗಳು; ಶೇ. 15ರಷ್ಟು ಕೃಷಿ ಕೂಲಿಗಾರರು; ಶೇ. 5ರಷ್ಟು ಸಾಗುವಳಿದಾರರಲ್ಲದ ಹಾಗೂ ಗೇಣಿ ಪಡೆದು ಬಾಳುವ ಭೂಮಾಲಕರು ಎಂದು ಸರಕಾರದ ಅಂಕೆ-ಅಂಶಗಳಿಂದ ಕಂಡುಬರುತ್ತದೆ.

ಈ ಅಂಕೆ-ಅಂಶಗಳ ಆಧಾರದಲ್ಲಿ, ನಮ್ಮ ಪ್ರಾಂತದಲ್ಲಿ ಸ್ವಂತ ಜಮೀನಿನಲ್ಲಿ ಸ್ವತಃ ಸಾಗುವಳಿ ಮಾಡುವ ಭೂಮಾಲಕರೇ ಹೆಚ್ಚೆಂದೂ, "ಉಳುವವರೇ ಹೊಲದ ಒಡೆಯರು" ಎನ್ನುವಂಥ "ಆದರ್ಶ" ಸ್ಥಿತಿಗೆ ನಮ್ಮ ಪ್ರಾಂತ ಸಮೀಪಿಸುತ್ತಿದೆಯೆಂದೂ ಹೇಳಲಾಗುತ್ತದೆ. ಅಲ್ಲದೆ, ಈವರೆಗೆ ಬೇಸಾಯಗಾರರಾಗದೆ ಉಳಿದಿರುವ ಭೂಮಾಲಿಕರೂ ತಮ್ಮ ಜಮೀನುಗಳನ್ನು ಒಕ್ಕಲುಗಳಿಂದ ವಾಪಾಸು ವಶಪಡಿಸಿಕೊಂಡು ಸ್ವತಃ ಬೇಸಾಯಗಾರರು ಎನಿಸಿಕೊಂಡರೆ "ಉಳುವವರೇ ಹೊಲದ ಒಡೆಯರು" ಎಂಬ ಆದರ್ಶವನ್ನು ತಲುಪಿದಂತಾಗುವುದೆಂದೂ ಹೇಳಲಾಗುತ್ತದೆ.

ಆದರೆ ನಿಜವಾದ ಪರಿಸ್ಥಿತಿ ಏನು ? ಸರಕಾರದ ಅಂಕೆ ಅಂಶಗಳನ್ನೆ ಸ್ವಲ್ಪ ಕೆದಕಿ ನೋಡಿದರೆ ತಿಳಿಯುವುದು. ದೇಶದ ಇತರ ಎಲ್ಲ ಪ್ರದೇಶಗಳಂತೆಯೇ ಕರ್ನಾಟಕದಲ್ಲೂ ವ್ಯವಸಾಯಗಾರರಲ್ಲಿ ದೊಡ್ಡ ಭಾಗ ಹೊಲವಿಲ್ಲದ ಹಾಗು ಕಡು ಬಡತನದಿಂದ ನರಳುವ ಕೃಷಿ ಕೂಲಿಗಾರರು, ಇತರರ ಹೊಲವನ್ನು ಅತ್ಯಧಿಕ ಗೇಣಿಗೆ ವಹಿಸಿಕೊಂಡು ಬೇಸಾಯ ಮಾಡುವ ಒಕ್ಕಲುಗಳು, ಬರೇ ಅಲ್ಪ ಸ್ವಲ್ಪ ಜಮಿನಿರುವ ಸ್ವಂತ ಸಾಗುವಳಿದಾರ ಭೂಮಾಲಕ—ರೈತರಾಗಿದ್ದಾರೆ. ಜಮೀನಿನ ದೊಡ್ಡ ಭಾಗ ಜನಸಂಖ್ಯೆಯಲ್ಲೊಂದು ಅತ್ಯಲ್ಪ ಅಂಶದವರಾದ ದೊಡ್ಡ ಭೂಮಾಲಿಕರ ವಶದಲ್ಲಿ ಕೇಂದ್ರೀಕೃತವಾಗಿದೆ. ಉಳುವವರು ಹೊಲದ ಒಡೆಯರಾಗುವ ಆದರ್ಶ ಪರಿಸ್ಥಿತಿಯ ಕಡೆಗೆ ನಮ್ಮ ಪ್ರಾಂತ ಸಾಗುತ್ತಿದೆ ಎನ್ನುವುದು ಶುದ್ಧ ಸುಳ್ಳು. ಹಾಗಾಗುವುದರ ಬದಲು, ವರ್ಷದಿಂದ ವರ್ಷಕ್ಕೆ ಹೆಚ್ಚು ಹೆಚ್ಚು ಜಮೀನು ಸಾಗುವಳಿದಾರರಲ್ಲದ ದೊಡ್ಡ ಭೂಮಾಲಿಕರ ಕೈ ಸೇರುತ್ತಿದೆ. ಸಾಗುವಳಿದಾರರಲ್ಲದ ಈ ದೊಡ್ಡ ಭೂಮಾಲಿಕರು ರೈತರನ್ನು ಹಿಂಡಿ ಹಿಪ್ಪೆ ಮಾಡಿ ಪರೋಪಜೀವಿಗಳಾಗಿ ಬಾಳುತ್ತಾರೆ; ಹಣವನ್ನು ಜಮೀನಿನ ಮತ್ತು ಕೃಷಿಯ ಅಭಿವೃದ್ಧಿಗೆ ವಿನಿಯೋಗಿಸುವುದರ ಬದಲು ಹೆಚ್ಚು ಹೆಚ್ಚು ಆಸ್ತಿಯನ್ನು ಕೊಂಡುಕೊಳ್ಳುವುದಕ್ಕೆ ವಿನಿಯೋಗಿಸುತ್ತಾರೆ.

ಉದಾಹರಣೆಗೆ : ವ್ಯವಸಾಯಗಾರರಲ್ಲಿ ಶೇ. 28ರಷ್ಟು ಜನ ಹೊಲ ಇಲ್ಲದವರಾಗಿದ್ದಾರೆ. 100 ಎಕ್ರೆಗಿಂತ ಹೆಚ್ಚು ಜಮೀನಿರುವ ಭೂಮಾಲಿಕರ ಸಂಖ್ಯೆ ಜನಸಂಖ್ಯೆಯ ಶೇ. 0·56 ಅಥವ ಸಾವಿರದಲ್ಲಿ ಸುಮಾರು 6 ಮಾತ್ರ. ಆದರೆ ಒಟ್ಟು ಜಮೀನಿನ ಶೇ. 10·2 ರಷ್ಟೂ ಅವರ ಆಸ್ತಿಯಾಗಿದೆ. 5 ಎಕ್ರೆಗಿಂತ ಕಡಿಮೆ ಜಮೀನಿರುವವರು ಶೇ. 47 ರಷ್ಟಿದ್ದಾರೆ; ಆದರೆ ಅವರಲ್ಲಿರುವ ಜಮೀನು ಒಟ್ಟು ಜಮೀನಿನ ಶೇ. 10·32 ಮಾತ್ರ. 10 ಎಕ್ರೆಗಿಂತ ಕಮ್ಮಿ ಜಮೀನಿರುವವರನ್ನು ತೆಗೆದುಕೊಂಡರೆ, ಅವರ ಸಂಖ್ಯೆ ಒಟ್ಟಿನಲ್ಲಿ ಸುಮಾರು ಮೂರರಲ್ಲಿ ಎರಡರಷ್ಟಾಗುತ್ತದೆ. ಆದರೆ ಅವರಲ್ಲಿರುವ ಜಮೀನು ಒಟ್ಟಿನಲ್ಲಿ ನಾಲ್ಕರಲ್ಲೊಂದು ಭಾಗ ಮಾತ್ರವಿರುತ್ತದೆ. ನಮ್ಮ ಪ್ರಾಂತದಲ್ಲಿ ಭೂಮಾಲಕರ ಪೈಕಿ ಸ್ವಂತ ಸಾಗುವಳಿ ಮಾಡುವವರಲ್ಲಿ 15-30 ಎಕ್ರೆ ಜಮೀನಿರುವವರೇ ಹೆಚ್ಚು. ಚಿಕ್ಕ ಭೂಮಾಲಕರಲ್ಲಿ ಸ್ವಂತ ಸಾಗುವಳಿ ಮಾಡುವವರು ಹೆಚ್ಚಾಗಿದ್ದಾರೆ; ದೊಡ್ಡ ಭೂಮಾಲಕರಲ್ಲಿ ಗೇಣಿಗೆ ಜಮೀನು ಕೊಡುವವರು ಹೆಚ್ಚಾಗಿದ್ದಾರೆ. ಸ್ವಂತ ಸಾಗುವಳಿ ಹಾಗು ಒಕ್ಕಲುಗಳಿಂದ ಸಾಗುವಳಿ ಆಗುವ ಪ್ರಮಾಣ ಹೀಗಿದೆ

ಹಿಡುವಳಿ ವಿಸ್ತೀರ್ಣ	ಸ್ವಂತ ಸಾಗುವಳಿ	ಒಕ್ಕಲು ಸಾಗುವಳಿ
15 ಎಕ್ರೆಗಳಿಗಿಂತ ಚಿಕ್ಕದು	85	15
15 ರಿಂದ 25 ಎಕ್ರೆ	84	16
25 ರಿಂದ 50 ಎಕ್ರೆ	78	22
50 ರಿಂದ 100 ಎಕ್ರೆ	75	25
100 ಎಕ್ರೆಗಿಂತ ದೊಡ್ಡದು	50	50

ಒಕ್ಕಲುಗಳಿಂದ ಸಾಗುವಳಿಯಾಗುವ ಜಮಿನಿನಲ್ಲಿ ಶೇ. 22 ರಷ್ಟು 100 ಎಕ್ರೆಗಿಂತ ಹೆಚ್ಚು ಜಮೀನಿರುವ ಭೂಮಾಲಕರದ್ದಾಗಿದೆ.

ಪ್ರಾಂತದ ಎಲ್ಲ ಪ್ರದೇಶಗಳಲ್ಲೂ ಗೇಣಿ ಒಕ್ಕಲುತನದ ಸಮಸ್ಯೆಯು ಕಡೆಗಣಿಸಲಾಗದಷ್ಟು ತೀವ್ರವಾಗಿಯೇ ಇದೆ. ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಂತೂ ವ್ಯವಸಾಯಗಾರರಲ್ಲಿ ಶೇ. 56 ರಷ್ಟು ಭಾಗ ಒಕ್ಕಲುಗಳಾಗಿದ್ದಾರೆ. ದಕ್ಷಿಣ ಕನ್ನಡದಲ್ಲಿ ಒಟ್ಟು ಜಮೀನಿನ ಶೇ. 66 ರಷ್ಟೂ, ಉತ್ತರ ಕನ್ನಡದಲ್ಲಿ ಶೇ. 55 ರಷ್ಟೂ, ಬಿಜಾಪುರದಲ್ಲಿ ಶೇ. 40 ರಷ್ಟೂ ಉಳಿದ ಜಿಲ್ಲೆಗಳಲ್ಲಿ ಶೇ. 3ರಿಂದ 20 ರವರೆಗೂ ಒಕ್ಕಲುಗಳಿಂದ ಸಾಗುವಳಿಯಾಗುತ್ತದೆ.

ಗೇಣಿಯ ಪ್ರಮಾಣವು ಪ್ರಾಂತದ ಎಲ್ಲ ಪ್ರದೇಶಗಳಲ್ಲೂ ಅತ್ಯಧಿಕವಾಗಿದೆ. ಕೆಲವು ವರ್ಷಗಳ ಹಿಂದೆಯೇ ಗೇಣಿಯು ಉತ್ಪತ್ತಿಯ $\frac{1}{6}$ ಕ್ಕಿಂತ ಹೆಚ್ಚು ಇರಕೂಡದೆಂದು ಕಾಯಿದೆ ಜಾರಿಗೆ ಬಂದಿರುವ ಕಾರವಾರ, ಬಿಜಾಪುರ, ಧಾರವಾಡ ಹಾಗು ಬೆಳಗಾಂವಿ ಜಿಲ್ಲೆಗಳಲ್ಲಿ ಕೂಡ ನಿಜವಾಗಿ ಗೇಣಿಯು $\frac{1}{3}$ ರಿಂದ $\frac{1}{2}$ ಮತ್ತು ಕೆಲವು ಸಂದರ್ಭಗಳಲ್ಲಿ ಅದಕ್ಕಿಂತಲೂ ಹೆಚ್ಚೇ ಇದೆಯೆಂದು ಗೋಖಲೆ ಇನ್‌ಸ್ಟಿಟ್ಯೂಟ್‌ನವರ ವರದಿಯಿಂದ ಗೊತ್ತಾಗುತ್ತದೆ. ಹೈದರಾಬಾದು ಭಾಗದಲ್ಲಾಗಲಿ ಗೇಣಿಯ ಪ್ರಮಾಣ ಅದಕ್ಕಿಂತ ಕಡಿಮೆಯಿಲ್ಲ. ಗೇಣಿ ನಿರ್ಣಯ ಕಾನೂನುಗಳು ಇತ್ತೀಚಿನವರೆಗೆ ಜಾರಿಯಾಗದ ಮತ್ತು ಈಗಲೂ ಪ್ರಾಯೋಗಿಕವಾಗಿಲ್ಲದ ದಕ್ಷಿಣ ಕನ್ನಡ ಜಿಲ್ಲೆ, ಹಳೆಯ ಮೈಸೂರು ಪ್ರದೇಶ ಹಾಗು ಕೊಡಗಿನಲ್ಲಿ ಗೇಣಿಯ ಪ್ರಮಾಣವು ಮೇಲೆ ಹೇಳಿರುವುದಕ್ಕಿಂತಲೂ ಹೆಚ್ಚಿನದಿದೆ.

ಒಕ್ಕಲೆಬ್ಬಿಸುವ ಹಾವಳಿ ಪ್ರಾಂತದ ಆದ್ಯಂತವಾಗಿ ನಡೆಯುತ್ತಿದೆ. ಒಕ್ಕಲೆಬ್ಬಿಸುವುದನ್ನು ತಡೆಯುವ ಕಾನೂನುಗಳಲ್ಲಿರುವ ಲೋಪದೋಷಗಳಿಂದಾಗಿಯೂ, ಕಾನೂನುಗಳನ್ನು ಜಾರಿಗೊಳಿಸುವುದರಲ್ಲಿ ಆಳ್ವಿಕೆಯಾಂಗ ತೋರಿಸುವ ಅಸಡ್ಡೆ ಹಾಗೂ ಭೂಮಾಲಕ ಪಕ್ಷಪಾತತನದಿಂದಾಗಿಯೂ ಒಕ್ಕಲೆಬ್ಬಿಸುವುದು ಎಡೆತಡೆಯಿಲ್ಲದೆ ನಡೆದಿದೆ, ಈಗಲೂ ನಡೆಯುತ್ತಿದೆ. ಒತ್ತಾಯದಿಂದಲೂ ಬಲಾತ್ಕಾರದಿಂದಲೂ ಒಕ್ಕಲೆಬ್ಬಿಸುವುದಲ್ಲದೆ ಸ್ವಂತ ಸಾಗುವಳಿಗೆ ಜಮೀನು ಬೇಕೆಂದು, ಗೇಣಿ ಬಾಕಿಯಿದೆಯೆಂದು, ಹೊಲವನ್ನು ಕೆಡಿಸಲಾಗಿದೆಯೆಂದು, ಒಕ್ಕಲು ಸ್ವತಃ ಬಿಟ್ಟು ಕೊಟ್ಟಿದ್ದಾನೆಂದು, ಅನೇಕ ತರದ ನೆಪಗಳಿಂದ ದಾವೆ ಹೂಡಿ ಒಕ್ಕಲೆಬ್ಬಿಸುವುದೂ ಧಾರಾಳವಾಗಿ ನಡೆಯುತ್ತಿದೆ.

ಭೂಸುಧಾರಣೆಯ ಧೋರಣೆ

ನಮ್ಮ ದೇಶದ ಇಂದಿನ ಪರಿಸ್ಥಿತಿಯಲ್ಲಿ ಯಾವ ಕ್ಷೇತ್ರದಲ್ಲಿ ಪ್ರಗತಿಯನ್ನು ಸಾಧಿಸುವುದಕ್ಕೂ ಪ್ರಗತಿಶೀಲ ಭೂಸುಧಾರಣೆಯಾಗದೆ ಸಾಧ್ಯವಿಲ್ಲ ಎನ್ನುವುದು ಎಲ್ಲರೂ ಒಪ್ಪಿಕೊಂಡಿರುವ ವಿಷಯವಾಗಿದೆ. ಆಹಾರಧಾನ್ಯಗಳ ಮತ್ತು ಔದ್ಯೋಗಿಕ ಕಚ್ಚಾಮಾಲುಗಳ ಉತ್ಪಾದನೆ ಹೆಚ್ಚಾಗುವಂತೆ ವ್ಯವಸಾಯ ಅಭಿವೃದ್ಧಿ ಹೊಂದಬೇಕಾದರೆ ಭೂಸುಧಾರಣೆ ಆಗಲೇಬೇಕು. ಆಂತರಿಕ ಮಾರುಕಟ್ಟೆ ಬೆಳೆಯಬೇಕಾದರೆ ಭೂಸುಧಾರಣೆ ಆಗಲೇಬೇಕು. ಜನರ ಆರ್ಥಿಕ ಹಾಗೂ ಸಾಂಸ್ಕೃತಿಕ ಸ್ಥಿತಿ ಸುಧಾರಿಸಬೇಕಾದರೂ ಭೂಸುಧಾರಣೆ ಆಗಲೇ ಬೇಕು. ಇದನ್ನು ಯೋಜನಾ ಮಂಡಲ ಒಪ್ಪಿದೆ, ಸರಕಾರದ ವಕ್ತಾರರು ಪದೇ ಪದೇ ಒತ್ತಿ ಹೇಳುತ್ತಾರೆ. ಆದರೆ ಕಾರ್ಯತಃ ಭೂಸುಧಾರಣೆಯ ಬಗ್ಗೆ, ಕೇರಳ ಸರಕಾರವೊಂದನ್ನು ಬಿಟ್ಟು ಮತ್ತೆಲ್ಲ ರಾಜ್ಯ ಸರಕಾರಗಳೂ ಕೇಂದ್ರ ಸರಕಾರವೂ ಅಸಡ್ಡೆಯಿಂದ ಕಾಲಹರಣ ಮಾಡುತ್ತಿದೆ. ಕೇವಲ ತಡವರಿಸುವುದಷ್ಟೇ ಅಲ್ಲ, ಪರಿಸ್ಥಿತಿಯ ಒತ್ತಡಕ್ಕೂ ರೈತ ಚಳುವಳಿಯ ನಿರ್ಬಂಧಕ್ಕೂ ಗುರಿಯಾಗಿ ಭೂಸುಧಾರಣೆಗೆ ಸಂಬಂಧಿಸಿದ ಶಾಸನಗಳನ್ನೇನಾದರೂ ಮಾಡುವಾಗಲೂ ರೈತರ ಹಿತಕ್ಕೆ ವಿರೋಧವಾಗಿ ದೊಡ್ಡ ಭೂಮಾಲಕರಿಗೆ ಸೌಲಭ್ಯತೆಗಳನ್ನು ಕೊಡುವಂಥ ಶರತ್ತುಗಳನ್ನು ಸೇರಿಸಿ ನಿರರ್ಥಕವಾದ ಹಾಗೂ ಅಪಾಯಕಾರಿಯಾದ ಶಾಸನಗಳನ್ನೇ ಮಾಡಲಾಗುತ್ತದೆ.

ಪಂಡಿತ ಜವಹರಲಾಲ್ ನೆಹರೂರವರು, ಯೋಜನಾ ಮಂತ್ರಿ ನಂದಾರವರು, ಆಹಾರ ಮಂತ್ರಿ ಜೈನ್‌ರವರು, ಸಮಾಜ ವಿಕಾಸ ಮಂತ್ರಿ ಡೇರವರು—ಇವರೆಲ್ಲ ಭೂಸುಧಾರಣೆಯ ಅವಶ್ಯಕತೆಯನ್ನು ಆಗಾಗ ಹೇಳುತ್ತಿದ್ದಾರೆ. ಇತ್ತೀಚೆಗೆ ಬೆಂಗಳೂರಿಗೆ ಆಗಮಿಸಿದ ಶ್ರೀ ಡೇರವರು "ಕಾರ್ಷಿಕ ಉತ್ಪಾದನೆ ಹೆಚ್ಚಾಗಬೇಕಾದರೆ ಉಳುವವರೇ ಹೊಲದ ಒಡೆಯರಾಗಬೇಕು" ಎಂದೂ, "ಉಳುವವರಿಗೆ ಹೊಲ, ಅಥವ ನಡುಗಾಲದ ಒಂದು ಹೆಜ್ಜೆಯಾಗಿ ಉತ್ಪತ್ತಿಯಲ್ಲಿ ನ್ಯಾಯವಾದ ಭಾಗ ಉಳುವವರಿಗೆ ದೊರಕಿಸುವ .... ಪ್ರಗತಿಶೀಲ ಭೂಸುಧಾರಣಾ ಶಾಸನ ಆಗಬೇಕು" ಎಂದೂ ಈ ಕಾರ್ಯಕ್ಕೆ "ಪಾಳೆಯಗಾರ-ಬಂಡವಾಳಗಾರ-ಜಾತೀಯವಾದಿ ಬಣಗಳು ತಡೆಯೊಡ್ಡುತ್ತವೆ" ಎಂದು ಹೇಳಿದ್ದಾರೆ. ಈ ಮಂತ್ರಿಗಳ ಮಾತುಗಳೇನೋ ಚೆನ್ನಾಗಿವೆ. ಅದನ್ನು ಎಲ್ಲರೂ ಒಪ್ಪತಕ್ಕದೆ. ಆದರೆ ಬಾಯಲ್ಲಿ ಹೇಳುವ ಈ ಮಾತುಗಳನ್ನು ಕಾರ್ಯತಃ ನೆರವೇರಿಸದಿರುವುದು ಶೋಚನೀಯವಿದೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳು "ಪಾಳೆಯಗಾರ-ಬಂಡವಾಳಗಾರ-ಜಾತೀಯವಾದಿ ಬಣಗಳ" ಕೈವಾಡಕ್ಕೆ ಒಳಗಾಗಿರುವುದರಿಂದ ಹೀಗಾಗುತ್ತಿದೆ ಎನ್ನುವುದರಲ್ಲಿ

ಅನುಮಾನವಿಲ್ಲ. ಪ್ರಗತಿಶೀಲ ಭೂಸುಧಾರಣೆ ಆಗಬೇಕೆನ್ನುವವರು ಮಂತ್ರಿ ಮಂಡಲಗಳಲ್ಲೂ ಶಾಸನ ಸಭೆಗಳಲ್ಲೂ ಆಳುವ ಪಕ್ಷದಲ್ಲೂ ಹಲವರಿದ್ದಾರೆ, ನಿಜ. ಆದರೆ ಅವರ ಬಾಯಿ ಮುಚ್ಚಿಸುವ, ಕೈ ತಡೆಯುವ, "ಪಾಳೆಯಗಾರ-ಬಂಡವಾಳಗಾರ-ಜಾತೀಯವಾದಿ ಬಣಗಳ" ಪ್ರಭಾವವೇ ಇನ್ನೂ ಅವರೊಳಗೆ ಬಲವಾಗಿದೆ. ಈ ಪ್ರತಿಗಾಮಿ ಶಕ್ತಿಯನ್ನು ವಿರೋಧಿಸಿ ಸೋಲಿಸಿದರೆನೇ ಪ್ರಗತಿಶೀಲ ಭೂಸುಧಾರಣೆಯು ಕಾರ್ಯಗತವಾಗಲು ಸಾಧ್ಯವೆನ್ನುವುದು ನಿರ್ವಿವಾದವಾಗಿದೆ.

ಮಂತ್ರಿಗಳ ಬರಿಯ ಮಾತುಗಳಾಗಲಿ, ಅರ್ಧಂಬರ್ಧ ಶಾಸನಗಳಾಗಲಿ ರೈತರಿಗೆ ನಿಜವಾದ ಭದ್ರತೆಯನ್ನೋ, ಸೌಲಭ್ಯತೆಯನ್ನೋ ಒದಗಿಸುತ್ತವೆ ಎಂದು ಭಾವಿಸುವುದು ಬರಿಯ ಭ್ರಮೆಯಾಗುವುದು. ಇಂಥ ಬರಿ ಮಾತುಗಳೂ ಲೋಪದೋಷಗಳಿರುವ ಶಾಸನಗಳೂ ಒಳಿತು ಮಾಡಿರುವುದಕ್ಕಿಂತ ಹೆಚ್ಚು ಕೆಡುಕನ್ನೇ ಮಾಡಿವೆಯೆಂದು ಹೇಳಿದರೆ ತಪ್ಪಾಗಲಾರದು.

ಈಗ ಹೆಚ್ಚುಕಡಿಮೆ ಎಲ್ಲ ರಾಜ್ಯಗಳಲ್ಲೂ ಒಕ್ಕಲುತನಕ್ಕೆ ಸಂಬಂಧಿಸಿದ ಶಾಸನಗಳು ಜಾರಿಗೆ ಬಂದಿವೆ. ಈ ಶಾಸನಗಳಲ್ಲಿ ಮುಖ್ಯವಾಗಿ ಎರಡು ವಿಷಯಗಳು ಅಡಗಿವೆ ಎನ್ನಬಹುದು: (1) ಒಕ್ಕಲುಗಳಿಗೆ ಭದ್ರತೆ; (2) ಗೇಣಿಯ ನಿಯಂತ್ರಣ. ಈ ಶಾಸನಗಳು ಹೇಗೆ ಕಾರ್ಯಗತವಾಗಿವೆ ಎನ್ನುವುದನ್ನು ಸೂಕ್ಷ್ಮವಾಗಿ ನೋಡೋಣ.

ಬೊಂಬಾಯಿ ಮತ್ತು ಹೈದರಾಬಾದು ಟಿನೆನ್ಸಿ ಕಾಯಿದೆಗಳು ಎಲ್ಲ ರಾಜ್ಯಗಳಿಗೂ ಆದರ್ಶವಾಗಿವೆ ಎಂದು ಹೇಳಲಾಗುತ್ತದೆ. ಆದರೆ ಅವುಗಳಿಂದ ನಿಜವಾಗಿ ಆಗಿರುವುದೇನು? ಹೈದರಾಬಾದಿನ ಕಾಯಿದೆಯು ಜಾರಿಯಾಗಿ ನಾಲ್ಕು ವರ್ಷಗಳ ನಂತರ ಅದರ ಪರಿಣಾಮವನ್ನು ಪರೀಕ್ಷಿಸಿದಾಗ, 'ರಕ್ಷಿತ ಒಕ್ಕಲು'ಗಳ ಪೈಕಿ ನೂರಕ್ಕೆ 57ರಷ್ಟು ಮಂದಿಯೂ ಜಮೀನಿನಿಂದ ಹೊರಗೆ ತಳ್ಳಲ್ಪಟ್ಟಿರುವುದಾಗಿಯೂ ಒಕ್ಕಲುಗಳಿಂದ ಬೇಸಾಯವಾಗುತ್ತಿದ್ದ ಜಮೀನಿನ ಶೇ. 59 ಭಾಗವು ಒಕ್ಕಲುಗಳ ಕೈತಪ್ಪಿ ಹೋಗಿರುವುದಾಗಿಯೂ ಕಂಡುಬಂದಿದೆ. ಬೊಂಬಾಯಿ ಕಾಯಿದೆಯು 1948 ರಿಂದ ಜಾರಿಯಲ್ಲಿದ್ದು 1955ರಲ್ಲಿ ಅದರ ಪರಿಣಾಮವನ್ನು ಪರೀಕ್ಷಿಸಿದಾಗ, ".....(1) ಭೂಮಾಲಿಕರು ಸ್ವಂತ ಸಾಗುವಳಿಗೆಂದು ಧಾರಾಳವಾಗಿ ಜಮೀನನ್ನು ವಶಪಡಿಸಿಕೊಂಡಿರುವುದರಿಂದಲೂ ಒಕ್ಕಲುಗಳ ಬದಲಾವಣೆ ತುಂಬ ನಡೆದಿರುವುದರಿಂದಲೂ ಒಕ್ಕಲುಗಳಿಗೆ ಕಾಯಿದೆಯಲ್ಲಿ ಕೊಡಲಾಗಿರುವ ರಕ್ಷಣೆಯು ಕಾರ್ಯದಲ್ಲಿ ಫಲಕಾರಿಯಾಗಲಿಲ್ಲ; (2) ....ಜಮೀನಿನ ಮಾಲಿಕತ್ವವನ್ನು ಬೇಸಾಯಗಾರರಿಗೆ ವರ್ಗಾವಣೆ ಮಾಡುವುದನ್ನು ಪ್ರೋತ್ಸಾಹಿಸುವ ನಿಯಮಗಳು ಸಫಲವಾಗಲಿಲ್ಲ; (3) ಗೇಣಿಯು ಕಡಿಮೆಯಾಗಿರುವುದನ್ನು ಸೂಚಿಸುವಂಥ ಚಿಹ್ನೆಗಳೇ ಕಂಡುಬರುವುದಿಲ್ಲ, ಗೇಣಿ ಒಕ್ಕಲು ಕ್ರಮಗಳಲ್ಲಿ ಯಾವ ಬದಲಾವಣೆಯೂ ಆಗಿರುವುದಿಲ್ಲ" ಎಂದು ಗೋಖಲೆ ಇನ್‌ಸ್ಟಿಟ್ಯೂಟ್ ಹೇಳುತ್ತದೆ. ರಿಸರ್ವ್ ಬ್ಯಾಂಕ್‌ನ ಜುಲೈ 1957ರ ಪ್ರಕಟನೆಯೂ ಅದನ್ನೇ ಉದ್ಧರಿಸಿರುತ್ತದೆ.

ಆದರ್ಶ ಕಾಯಿದೆಗಳ ಪರಿಣಾಮವೇ ಹೀಗಾದ ಬಳಿಕ, ಇತರ ರಾಜ್ಯಗಳಲ್ಲಿ ಅಮಲಿಗೆ ಬಂದಿರುವ ಕಾಯಿದೆಗಳ ಪರಿಣಾಮಗಳ ಕುರಿತು ಹೆಚ್ಚೇನೂ ಹೇಳಬೇಕಾಗಿಲ್ಲ.

ಹೀಗಾಗಲು ಕಾರಣವೇನು? ಕಾಯಿದೆಗಳಲ್ಲಿ ಭೂಮಾಲಿಕರಿಗೆ ಅನುಕೂಲವಾಗುವ ಅಂಶಗಳನ್ನು ಧಾರಾಳವಾಗಿ ಸೇರಿಸಿರುವುದು, ರೈತರಿಗೆ ಅನುಕೂಲವಾಗುವ ಅಂಶಗಳಿಂದ ತಪ್ಪಿಸಿಕೊಳ್ಳುವುದಕ್ಕೆ ಬೇಕಾದಷ್ಟು ಅವಕಾಶವನ್ನು ಕೊಡುವ ಲೋಪದೋಷಗಳನ್ನು ಒಳಪಡಿಸಿರುವುದು ಮುಖ್ಯ ಕಾರಣಗಳಾಗಿವೆ. ಗೇಣಿ ಕೊಟ್ಟರೆ ರಶೀದಿ ಕೊಡುವ ಕ್ರಮವಿಲ್ಲ; ಭೂಸಂಬಂಧದ ದಾಖಲೆಗಳು ಸರಿಯಾಗಿಲ್ಲ. ಸಾಲದುದಕ್ಕೆ, ಆಡಳಿತಾಂಗವು ಭೂಮಾಲಿಕರ ಪರವಾಗಿದ್ದು ರೈತರಿಗೆ ಕಾರ್ಯತಃ ಪ್ರಯೋಜನವಾಗದಂತೆ ಮಾಡುವುದು ಇಂದು ಎಲ್ಲೆಲ್ಲೂ ಕಂಡುಬರುತ್ತದೆ.

ಜತ್ತಿ ಸಮಿತಿಯ ವರದಿ

ರಾಜ್ಯದ ವಿವಿಧ ಭಾಗಗಳಲ್ಲಿರುವ ಭೂಸಂಬಂಧದ ಕಾಯಿದೆಗಳನ್ನು ಸಮನ್ವಯಗೊಳಿಸುವ ಉದ್ದೇಶದಿಂದ ಹೊಸ ಮೈಸೂರು ಸರಕಾರವು ನೇಮಿಸಿದ್ದ ಜತ್ತಿ ಸಮಿತಿಯ ವರದಿ ಈಗ ಪ್ರಕಟವಾಗಿದೆ. ಸಮಿತಿಯು ವಿಳಂಬ ಮಾಡದೆ ಸಕಾಲದಲ್ಲಿ ವರದಿಯನ್ನು ಒಪ್ಪಿಸಿರುವುದು ನಿಜವಾಗಿ ಸ್ವಾಗತಾರ್ಹವಿದೆ. ಕೆಲವು ಪ್ರಾಂತಗಳಲ್ಲಿರುವಂತೆ ಇನ್ನು ಮುಂದಕ್ಕೆ ಕೊಂಡುಕೊಳ್ಳುವ ಜಮೀನಿಗೆ ಮಾತ್ರವಲ್ಲ, ಈಗ ಸ್ವಾಧೀನವಲ್ಲಿರುವಜಮೀನಿಗೂ ಹಿಡುವಳಿಯ ಪರಿಮಿತಿಯನ್ನು ನಿರ್ಣಯಿಸಲು ಸಮಿತಿಯು ಶಿಫಾರಸು ಮಾಡಿರುವುದು ಸಮಂಜಸವಿದೆ. ಆದರೆ ಈ ವರದಿಯಲ್ಲಿ ಇರುವಂತೆಯೇ ಇಡೀ ರಾಜ್ಯಕ್ಕೊಂದು ಕಾಯಿದೆ ಮಾಡುವುದಾದರೆ ಅದರಿಂದ ಒಳಿತಾಗುವುದಕ್ಕಿಂತಲೂ ಕೆಡುಕೇ ಹೆಚ್ಚಾಗುವುದೆಂದು ಹೇಳದೆ ನಿರ್ವಾಹವಿಲ್ಲ.

ಜತ್ತಿ ಸಮಿತಿಯ ಒಂದೊಂದೇ ಶಿಫಾರಸುಗಳನ್ನು ಪರಿಶೀಲಿಸೋಣ. ಈಗ ಬೇಸಾಯ ಮಾಡುತ್ತಿರುವವರಿಗೆ ಹೊಲದ ಒಡೆತನವನ್ನು ಕೊಡುವುದೂ. ಭೂಮಾಲಿಕರ ಹಿಡುವಳಿಗೊಂದು ಪರಿಮಿತಿಯನ್ನು ನಿರ್ಣಯಿಸಿ ಅದಕ್ಕಿಂತ ಹೆಚ್ಚಿನದನ್ನು ಅವರಿಂದ ತೆಗೆದು ರೈತರಿಗೆ ಹಂಚುವ ಕ್ರಮವನ್ನು ಸಮಿತಿಯು ನಿಷೇಧಿಸಿದೆ. ಅದರ ಬದಲು ಭೂಮಾಲಿಕರೇ ಸುಲಭದಲ್ಲಿ "ಸಾಗುವಳಿದಾರರು" ಎನಿಸಿಕೊಂಡು ಜಮೀನನ್ನು ನಿಜವಾದ ಸಾಗುವಳಿದಾರರಿಂದ ವಾಪಾಸು ಪಡೆಯುವುದಕ್ಕೆ ಧಾರಳವಾಗಿ ಅವಕಾಶವನ್ನು ಕೊಡುವ ಶಿಫಾರಸು ಮಾಡಿದೆ.

ಒಂದು ಮೂಲ ಹಿಡುವಳಿ (ಅಂದರೆ ವರ್ಷಕ್ಕೆ ರೂ. 400 ನಿವ್ವಳ ಅಥವಾ ತರಿಭೂಮಿಯಾದರೆ ರೂ. 800 ಹಾಗು ಒಣ ಭೂಮಿಯಾದರೆ ರೂ. 1200 ಒಟ್ಟು ಉತ್ಪತ್ತಿ ಬರುವ ಜಮೀನು) ಇರುವವರು ಅಷ್ಟನ್ನೂ ಸ್ವಂತ ಸಾಗುವಳಿಗೆಂದು ಒಕ್ಕಲುಗಳಿಂದ ವಾಪಾಸು ಪಡೆಯಬಹುದು.

ಮೂಲ ಹಿಡುವಳಿಗಿಂತ ಹೆಚ್ಚು, ಅಂದರೆ ಒಂದು ಕುಟುಂಬ ಹಿಡುವಳಿಗಿಂತ (ಅಂದರೆ ಮೂಲ ಹಿಡುವಳಿಯ 3ರಷ್ಟಕ್ಕಿಂತ) ಕಡಿಮೆ ಜಮೀನು ಇರುವವರು ಒಕ್ಕಲುಗಳಿಂದ ಅರ್ಧಾಂಶ ಜಮೀನನ್ನು ಪಡೆಯಬಹುದು. ಕನಿಷ್ಟಪಕ್ಷ ಒಂದು ಮೂಲ ಹಿಡುವಳಿಯಷ್ಟನ್ನು(ಒಕ್ಕಲಿಗೆ ಅರ್ಧಾಂಶ ಉಳಿಯದಿದ್ದರೂ)ವಶಪಡಿಸಿಕೊಳ್ಳುವ ಹಕ್ಕು ಭೂಮಾಲಕನಿಗೆ ಇದ್ದೇ ಇದೆ.

ಒಂದು ಕುಟುಂಬ ಹಿಡುವಳಿಗಿಂತ ಹೆಚ್ಚು, ಆದರೆ ಪರಮಾವಧಿ ಪರಿಮಿತಿ (ಕುಟುಂಬ ಹಿಡುವಳಿಯ 4½ ಪಾಲು) ಗಿಂತ ಕಡಿಮೆ ಜಮೀನು ಇರುವವರು ಒಕ್ಕಲಿಗ ಕನಿಷ್ಟಪಕ್ಷ ಒಂದು ಮೂಲ ಹಿಡುವಳಿಯಷ್ಟು ಜಮೀನನ್ನು ಬಿಟ್ಟು ಪರಮಾವಧಿಯ ಪರಿಮಿತಿಗೆ ಒಳಪಡುವಷ್ಟನ್ನು ವಾಪಾಸು ಪಡೆಯಬಹುದು,

ಭೂಮಾಲಕನಿಗೆ ಒಂದು ಕುಟುಂಬ ಹಿಡುವಳಿಗಿಂತ ಕಡಿಮೆಯಿದ್ದರೆ ಅಥವ ಸ್ವಂತ ಸಾಗುವಳಿಗೆ ಏನೂ ಜಮೀನು ಸ್ವಾಧೀನದಲ್ಲಿ ಇಲ್ಲದಿದ್ದರೆ ಒಕ್ಕಲಿನಿಂದ ಅವನಲ್ಲಿರುವುದರ ಅರ್ಧಾಂಶ ಜಮೀನನ್ನು ವಾಪಾಸು ಪಡೆಯಬಹುದು. ಹಾಗೆ ವಾಪಾಸು ಪಡೆಯುವಾಗ ಒಕ್ಕಲಿಗೆ ಒಂದು ಮೂಲ ಹಿಡುವಳಿಯಷ್ಟಾದರೂ ಉಳಿಯಬೇಕು; ಮಾಲಕನಿಗೆ ಒಂದು ಕುಟುಂಬ ಹಿಡುವಳಿಗಿಂತ ಹೆಚ್ಚು ದೊರಕಬಾರದು.

ಪರಿಮಿತಿಗಿಂತ ಹೆಚ್ಚು ಜಮೀನನ್ನು ಸ್ವಂತ ಸಾಗುವಳಿ ಮಾಡುತ್ತಿರುವ ಮಾಲಕನು ಒಕ್ಕಲುಗಳಿಂದ ಮತ್ತೆ ಹೆಚ್ಚು ಜಮೀನನ್ನು ಪಡೆಯಬಾರದು. ಪರಿಮಿತಿಗಿಂತ ಹೆಚ್ಚು ಜಮೀನಿದ್ದರೂ ಸ್ವಂತ ಸಾಗುವಳಿಗೆ ಸ್ವಾಧೀನದಲ್ಲಿ ಏನೂ ಇಲ್ಲದ ಮಾಲಿಕರು ಒಕ್ಕಲುಗಳಿಂದ ಅವರಲ್ಲಿರುವುದರ ಅರ್ಧಾಂಶ ಜಮೀನನ್ನು—ಪರಿಮಿತಿಯಷ್ಟನ್ನು—ವಾಪಾಸು ಪಡೆಯಬಹುದು. ಆಗ ಒಕ್ಕಲಿಗೆ ಮೂಲ ಹಿಡುವಳಿಯಷ್ಟಾದರೂ ಉಳಿಯಬೇಕು.

ಜತ್ತಿ ಸಮಿತಿಯ ಈ ಸೂಚನೆಗಳು ಬಹಳ ಅಪಾಯಕಾರಿ ಪರಿಣಾಮವನ್ನು ಉಂಟುಮಾಡುವವು. ಒಂದನೆಯದಾಗಿ ಜತ್ತಿ ಸಮಿತಿಯು ಸೂಚಿಸಿರುವ ಪರಿಮಿತಿಯು ಅತ್ಯಧಿಕವಾಗಿದೆ. ವರ್ಷಕ್ಕೆ ರೂ. 10,800 ಒಟ್ಟು ಆದಾಯ ಬರುವ ತರಿ ಜಮೀನು ಅಥವಾ ರೂ. 16,200 ಒಟ್ಟು ಆದಾಯ ಬರುವ ಖುಷ್ಕಿ ಜಮೀನು 5 ಸದಸ್ಯರ ಕುಟುಂಬವಿರುವ ಭೂಮಾಲಿಕನಿಗೆ "ಸ್ವಂತ ಸಾಗುವಳಿಗೆ" ದೊರಕುವುದು. ಕುಟುಂಬದಲ್ಲಿ ಅಥವ ಅದಕ್ಕಿಂತ ಹೆಚ್ಚು ಸದಸ್ಯರಿದ್ದರೆ ಅದರ ಎರಡರಷ್ಟು ಜಮೀನು "ಸ್ವಂತ ಸಾಗುವಳಿಗೆ" ದೊರಕುವುದು. ಒಕ್ಕಲಿಗೆ ಉಳಿಯುವುದು ಒಂದು ಮೂಲ ಹಿಡುವಳಿಯಷ್ಟು ಮಾತ್ರ. ಅದು ಕೂಡ ಎಲ್ಲ ಸಂದರ್ಭಗಳಲ್ಲೂ ಉಳಿಯುವುದಿಲ್ಲ.

ಎರಡನೆಯದಾಗಿ, ಸ್ವಂತ ಸಾಗುವಳಿಗೆ ಒಕ್ಕಲುಗಳಿಂದ ಹೊಲ ಬಿಡಿಸಬೇಕಾದರೆ ಭೂಮಾಲಕನ "ಜೀವನದ ಮುಖ್ಯ ಆಧಾರ ವ್ಯವಸಾಯ" ಆಗಿರಬೇಕು ಎಂಬ ಒಂದೇ ಒಂದು ನಿಬಂಧನೆ ಇರುವುದು. ಯೋಜನಾ ಮಂಡಲವು, "ಸ್ವಂತ ಸಾಗುವಳಿ"ಗೆ ಒಕ್ಕಲಿನಿಂದ ಜಮೀನನ್ನು ವಾಪಾಸು ಪಡೆಯಬೇಕಾದರೆ (1) ಭೂಮಾಲಿಕನಾಗಲಿ ಅವನ ಕುಟುಂಬದ ಒಬ್ಬ ಸದಸ್ಯನಾಗಲಿ ಸ್ವತಃ ಬೇಸಾಯದ ಮೇಲ್ವಿಚಾರ ನೋಡಿಕೊಳ್ಳಬೇಕು; (2) ಜಮೀನಿರುವ ಗ್ರಾಮದಲ್ಲಾಗಲಿ ನೆರೆ ಗ್ರಾಮದಲ್ಲಾಗಲಿ ವಾಸವಾಗಿರಬೇಕು; (3) ಬೇಸಾಯದ ಪೂರ್ತಿ ಹೊಣೆಗಾರಿಕೆಯನ್ನು ವಹಿಸಿರಬೇಕು: (4) ಮಾಲಿಕನಾಗಲಿ ಅವನ ಕುಟುಂಬದ ಒಬ್ಬ ಸದಸ್ಯನಾಗಲಿ ಜಮೀನಿನಲ್ಲಿ ಸ್ವತಃ ಶ್ರಮ ಪಡುವವನಾಗಿರಬೇಕು ಎಂದು ಹೇಳಿದೆ. ಆದರೆ ಜತ್ತಿ ಸಮಿತಿಯು ಇದನ್ನೆಲ್ಲ ಗಾಳಿಗೆ ತೂರಿಬಿಟ್ಟಿದೆ.

ದಕ್ಷಿಣ ಕನ್ನಡ ಹಾಗೂ ಕೊಳ್ಳೆಗಾಲದಲ್ಲಿ ಈಗ ಜಾರಿಯಲ್ಲಿರುವ ಕಾಯಿದೆಗಳ ಪ್ರಕಾರ, "ಸ್ವಂತ ಸಾಗುವಳಿದಾರ" ಎನಿಸಬೇಕಾದರೆ ಜಮೀನಿನಲ್ಲಿ ತಾನಾಗಲಿ ತನ್ನ ಕುಟುಂಬದ ಒಬ್ಬ ಸದಸ್ಯನಾಗಲಿ ಸ್ವತಃ ದುಡಿಯುವವನಾಗಿರಬೇಕು. ಹಾಗೂ ಒಕ್ಕಲಿನ ವಶದಲ್ಲಿರುವ ಜಮೀನಿನ ಅರ್ಧಾಂಶವನ್ನು ಮಾತ್ರ ವಾಪಾಸು ಪಡೆಯಬಹುದು. ಅದೂ ಅಲ್ಲದೆ ಹಾಗೆ ವಾಪಾಸು ಪಡೆಯಲು ಬಯಸುವ ಭೂಮಾಲಿಕನ ಸ್ವಾಧೀನದಲ್ಲಿ (ಗೇಣಿಗಾಗಲಿ ಸ್ವಂತದ್ದಾಗಲಿ) ಒಟ್ಟು 5 ಎಕ್ರೆ ತರಿಗಿಂತ ಹೆಚ್ಚು ಜಮೀನು ಇರಬಾರದು; ಶಾಸನ ಜಾರಿಗೆ ಬಂದಾಗ ಆತನಲ್ಲಿ 13⅓ ಎಕ್ರೆಗಿಂತ ಹೆಚ್ಚು ಜಮೀನಿನ ಮಾಲಿಕನಾಗಿದ್ದರೂ 1954—55ರಲ್ಲಿ ಆದಾಯ ತೆರಿಗೆ, ವ್ಯಾಪಾರ ತೆರಿಗೆ ಅಥವಾ ವೃತ್ತಿ ತೆರಿಗೆ ಕೊಟ್ಟಿರುವಲ್ಲಿ ಅಂಥವನು ಒಕ್ಕಲಿನಿಂದ ಜಮೀನನ್ನು ವಾಪಾಸು ಪಡೆಯಲು ಸಾಧ್ಯವಿಲ್ಲ.

ಜತ್ತಿ ಸಮಿತಿಯು ದಕ್ಷಿಣ ಕನ್ನಡದ ಮತ್ತು ಕೊಳ್ಳೆಗಾಲದ ಒಕ್ಕಲುಗಳಿಗೆ ಈಗ ಇರುವ ರಕ್ಷಣೆಯನ್ನೂ ರದ್ದು ಮಾಡಲು ಶಿಫಾರಸು ಮಾಡಿದೆ. ಹಿಂದೆ ಹೇಳಲಾಗಿರುವಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವ್ಯವಸಾಯಗಾರರಲ್ಲಿ ಶೇ. 56 ಮಂದಿ ಒಕ್ಕಲುಗಳು; ಜಮೀನಿನಲ್ಲಿ ಶೇ. 66 ಭಾಗ ಒಕ್ಕಲುಗಳಿಂದ ಬೇಸಾಯವಾಗುತ್ತದೆ. ಅಂಥಲ್ಲಿ ಈಗ ಇರುವ ರಕ್ಷಣೆಯನ್ನು ಕಿತ್ತು ಹಾಕಿದರೆ ಹಳ್ಳಿಗಳಲ್ಲಿ ಭೀಕರ ಗೊಂದಲದ ಉರಿಯನ್ನೇ ಹಚ್ಚಿದಂತಾಗುವುದು.

(9ನೇ ಪುಟ ನೋಡಿ)

ನಗರ ಸಭೆಯ ನೀತಿಗೆ ಪ್ರತಿಷೇಧ

ಮಂಗಳೂರು ನಗರ ಸಭೆಯಲ್ಲಿ ಕಾಂಗ್ರೆಸ್ ಸದಸ್ಯರೇ ಬಹುಮತವಿದ್ದಾರೆ. 1952ರಲ್ಲಿ ನಡೆದ ನಗರ ಸಭಾ ಚುನಾವಣೆಯಲ್ಲಿ ಕಾಂಗ್ರೆಸಿಗೆ ಇದ್ದ ಸ್ಥಾನಗಳು ಎಂಟು ಮಾತ್ರ. ಉಳಿದ ಸ್ಥಾನಗಳನ್ನು ಕಮ್ಯೂನಿಸ್ಟರೂ, ಬಹುಮಂದಿ ಸ್ವತಂತ್ರರೂ ಪಡೆದಿದ್ದರು. ಆದರೆ ಸುಮಾರು 1954ರಲ್ಲಿ ಸ್ವತಂತ್ರರಾಗಿ ಗೆದ್ದ ನಗರ ಸಭಾ ಸದಸ್ಯರಲ್ಲಿ ಹೆಚ್ಚಿನವರು–ನಗರ ಸಭಾಧ್ಯಕ್ಷರ ಸಮೇತ ತಮ್ಮ ಟೊಪ್ಪಿ ತಿರುಗಿಸಿ ಕಾಂಗ್ರೆಸ್ ಸೇರಿದರು. ಪುನಃ 1955ರಲ್ಲಿ ನಡೆದ ಚುನಾವಣೆಯಲ್ಲಿ, ಈ "ಸ್ವತಂತ್ರ"ರು ಕಾಂಗ್ರೆಸಿನಿಂದ ಸ್ಪರ್ಧಿಸಿ ಗೆದ್ದರು. ಈ ಚುನಾವಣೆಯಲ್ಲಿ ನಾಲ್ಕು ಮಂದಿ ಕಮ್ಯೂನಿಸ್ಟರೂ, ಎರಡು ಮಂದಿ ಕಮ್ಯೂನಿಸ್ಟ್ ಗುಂಪಿನ ಸ್ವತಂತ್ರರೂ ಗೆದ್ದರಲ್ಲದೆ, 5 ಮಂದಿ ಕಮ್ಯೂನಿಸ್ಟ್ ಬೆಂಬಲದ ಸ್ವತಂತ್ರರೂ ಆರಿಸಿ ಬಂದರು.

ಹೀಗೆ ಪುನಃ ಕಾಂಗ್ರೆಸಿನ ಹಿಡಿತದಲ್ಲಿ ಬಂದಂತಹ ನಗರ ಸಭೆ ಕಳೆದ ಎರಡು ವರ್ಷಗಳಲ್ಲಿ ನಡೆಸಿದ ನಗರಾಭಿವೃದ್ಧಿ ಕಾರ್ಯಗಳೆಂದರೆ ಅದು ತೆರಿಗೆದಾರರಿಗೆ ಸೂಚಿಕೆ ತರುವಂತಹದು. ನಗರ ಸಭೆಯ ಆಡಳಿತೆ ಶಿಥಿಲವಾಗುತ್ತಿದೆ, ಆಡಳಿತೆಯಲ್ಲಿರುವ ಪಕ್ಷ ನಗರ ಸಭೆಯ ದೈನಂದಿನ ಕಾರ್ಯಗಳಲ್ಲಿ ಕೈ ಹಾಕುತ್ತಿದೆ. ಕುಲ ಪಕ್ಷಪಾತತನ ಹೆಚ್ಚುತ್ತಿದೆ ಎಂಬಿತ್ಯಾದಿ ದೂರುಗಳು ಎಲ್ಲ ವಿಭಾಗದ ಜನರಿಂದಲೂ ಬರುತ್ತಿದೆ.

ನಗರಾಭಿವೃದ್ಧಿಯ ಕಾರ್ಯಗಳನ್ನು ನಡೆಸುವಾಗಲಂತೂ ಅನುಸರಿಸುತ್ತಿರುವ ಪಕ್ಷಪಾತತನ ಹೇಳತೀರದು. ಕಾಂಗ್ರೆಸ್ ಪಕ್ಷದ ಪ್ರಭಾವೀ ಸದಸ್ಯರ ವಾರ್ಡುಗಳಲ್ಲಿ ಅಷ್ಟೊಂದು ಅಗತ್ಯವಿಲ್ಲದ ಕೆಲಸಗಳನ್ನು ಆಗಾಗಲೇ ಮಾಡಿಸಲಾಗುತ್ತಿದೆ. ಪ್ರತಿ ಪಕ್ಷದ ಸದಸ್ಯರುಗಳ, ಕಾಂಗ್ರೆಸಿನೊಳಗೆ ಆಡಳಿತೆಯ ಪಂಗಡದೊಡನೆ ವ್ಯಾಜ್ಯ ಇರುವ ಸದಸ್ಯರುಗಳ ವಾರ್ಡುಗಳಲ್ಲಿ ಅತ್ಯಗತ್ಯದ ಕೆಲಸಗಳನ್ನು ಮಾಡಲೂ ನಗರ ಸಭೆ ಪ್ರಯತ್ನಿಸುತ್ತಿಲ್ಲ. ಪ್ರತಿಪಕ್ಷಗಳವರ ವಾರ್ಡುಗಳನ್ನಂತೂ ಉದ್ದೇಶಪೂರ್ವಕವಾಗಿ ಕಡೆಗಣಿಸಲಾಗುತ್ತಿದೆ. ಯಾವುದೆ ಒಂದು ಅಭಿವೃದ್ಧಿಯ ಕಾರ್ಯವಾಗಬೇಕೆಂದು ನಗರ ಸಭೆ ತೀರ್ಮಾನ ಮಾಡಿದರೂ ರಾಜಕೀಯ ದ್ವೇಷದ ಕುರುಡು ದೃಷ್ಟಿಯಿಂದ ಈ ಕಾರ್ಯವನ್ನು ನಡೆಸುತ್ತಿಲ್ಲ.

ಹೀಗೆ ಕಾಂಗ್ರೆಸ್ ಪಕ್ಷ ಇಷ್ಟರ ತನಕ ನಡೆಸಿಕೊಂಡು ಬಂದಿದ್ದರೂ, ಪ್ರತಿಪಕ್ಷದವರು ನಗರದ ಹಿತದ ದೃಷ್ಟಿಯಿಂದ, ನಗರ ಸಭಾಡಳಿತೆಗೆ ಬೆಂಬಲ ಕೊಡುತ್ತಾ—ಯಾವ ರಾಜಕೀಯ ದ್ವೇಷವಿದ್ದರೂ ಜನಹಿತ ಸಾಧಿಸುವಾಗ ಅದನ್ನು ಮುಂದೆ ತರಬಾರದು ಎಂಬುದಕ್ಕಾಗಿ ಸಹಿಸಿಕೊಂಡು ಬಂದಿದ್ದರು. ಆದರೆ ನಗರ ಸಭೆಯ ಕಾಂಗ್ರೆಸ್ ಪಕ್ಷದ ನೀತಿ ದಿನ ಹೋದಂತೆ ಸಂಕುಚಿತವಾಗುತ್ತಾ ಬರುತ್ತಿದೆಯಲ್ಲದೆ ಪ್ರತಿಪಕ್ಷದ ಸದಸ್ಯರ ಬೆಂಬಲ ಪಡೆದುಕೊಳ್ಳಲಿಕ್ಕವರು ನಿರಾಕರಿಸುತ್ತಿದ್ದಾರೆ.

ಕಳೆದ ತಾ॥ 17 ರಂದು ಸೇರಿದ ಕಮ್ಯೂನಿಸ್ಟ್ ಪಾರ್ಟಿಯ ನಗರ ಸಮಿತಿಯ ಮತ್ತು ನಗರದೊಳಗಿನ ಪಾರ್ಟಿ ಶಾಖೆಗಳ ಪ್ರತಿನಿಧಿಗಳ ಸಂಯುಕ್ತ ಸಭೆಯೊಂದರಲ್ಲಿ ನಗರ ಸಭೆಯ ಈ ಜನ ವಿರೋಧೀ ಸ್ವಾರ್ಥನೀತಿಯನ್ನು ಪ್ರತಿಭಟಿಸಿ ಚಳವಳ ಹೂಡಬೇಕೆಂದು ನಿರ್ಧರಿಸಿತು. ದಶಂಬರ ತಾ॥ 8ರಂದು ನಗರದಲ್ಲಿ ಪ್ರತಿಷೇಧ ದಿನವನ್ನು ಆಚರಿಸಬೇಕೆಂದೂ ಆ ಮೊದಲು ವಿವಿಧ ವಾರ್ಡುಗಳಲ್ಲಿ ಸಾರ್ವಜನಿಕ ಸಭೆಗಳನ್ನು ಕರೆದು ನಗರ ಸಭೆಯ ಇಂದಿನ ಈ ನೀತಿಯನ್ನು ಜನರಿಗೆ ವಿವರಿಸಬೇಕೆಂದೂ ತೀರ್ಮಾನ ಮಾಡಿದೆ. ಈ ಸಂಬಂಧದಲ್ಲಿ ನಗರ ಸಭೆಯ ಆಡಳಿತೆಯ ವಿಮರ್ಶಾತ್ಮಕ ಚಿಕ್ಕ ಪುಸ್ತಕವೊಂದನ್ನು ಪ್ರಕಟಿಸಬೇಕೆಂದೂ ಈ ಸಭೆ ನಿರ್ಧರಿಸಿದೆ.

ಪುನಃ ಚಿನ್ನದ ಪತ್ತೆ-ನೀರಿನಲ್ಲಿ

ಕಳೆದ ವಾರ ವರದಿಯಾದಂತೆ ಸುಮಾರು 16 ಲಕ್ಷ ರೂ. ಬೆಲೆ ಬಾಳುವ ಕಳ್ಳ ಚಿನ್ನದ ಪತ್ತೆಯನ್ನು ನಡೆಸಿದ ನಂತರ ಸುಂಕಾಧಿಕಾರಿಗಳ ವಿಶೇಷ ಪರಿಶ್ರಮದ ಫಲವಾಗಿ ಪುನಃ ಸುಮಾರು 10 ಲಕ್ಷ ರೂ. ಬೆಲೆ ಬಾಳುವ ಚಿನ್ನವನ್ನು ಪತ್ತೆ ಹಚ್ಚಲಾಗಿದೆ. ಅರಬ್ ಪ್ರದೇಶದಿಂದ ಬಂದ "ತೈಜರ್" ಎಂಬ ಮಂಜಿಯು ಮಂಗಳೂರಿನ ಅಳಿವೆ ಬಾಗಿಲಿನಲ್ಲಿ ನಿಂತಿದ್ದಾಗ ಅಧಿಕಾರಿಗಳು ತಪಾಸಿ ನಡೆಸುವರೆಂದು ಹೆದರಿ ಸಂಬಂಧಪಟ್ಟವರು ಅದರೊಳಗಿದ್ದ ಕಳ್ಳ ಚಿನ್ನವನ್ನು ನೀರಿಗೆಸೆದರೆಂದೂ, ಇದನ್ನು ತಿಳಿದ ಅಧಿಕಾರಿಗಳು ನೀರಿನಲ್ಲಿ ಮುಳುಗುವ ಡೈವರ್ಸ್‌ಗಳನ್ನು ತರಿಸಿ ಶೋಧಿಸಿದಾಗ ನೀರಿನಡಿಯಲ್ಲಿ ಸುಮಾರು 10 ಲಕ್ಷ ರೂ. ಬೆಲೆ ಬಾಳುವ ಚಿನ್ನ ದೊರೆತಿದೆಯೆಂದೂ ವರದಿ.

ಈ ಸಂಬಂಧ ಮಂಗಳೂರಿನ ಹಲವು "ಗಣ್ಯ" ಹಾಗೂ 'ಕಾಂಗ್ರೆಸಿನ ಮುಖಂಡ'ರೆನಿಸಿಕೊಳ್ಳುವ ವ್ಯಕ್ತಿಗಳನ್ನು ಪ್ರಶ್ನಿಸಲಾಗಿದೆಯೆಂದೂ, ಕೆಲವರ ಮನೆಗಳನ್ನು ಶೋಧಿಸಲಾಗಿದೆಯೆಂದೂ ತಿಳಿದುಬಂದಿದೆ.

ಪ್ರೆಸ್ ಕೆಲಸಗಾರರ ಪ್ರತಿಷೇಧ

ದ.ಕ. ಜಿಲ್ಲೆಯ 16 ಪ್ರೆಸ್‌ಗಳ ಮಜೂರರ ಮತ್ತು ಮ್ಹಾಲಕರೊಳಗಣ ವಿವಾದವೊಂದು ಕಳೆದ 4 ವರುಷಗಳಿಂದ ಕೊಳೆಯುತ್ತಾ ಬಿದ್ದಿದೆ. ಈ ವಿವಾದದ ಬಗ್ಗೆ ಮದರಾಸು ಸರಕಾರ ನಿಯಮಿಸಿದ ಇಂಡಸ್ಟ್ರಿಯಲ್ ಟ್ರಿಬ್ಯುನಲ್ ತೀರ್ಪು ಕೊಟ್ಟಿತ್ತು. ಆ ತೀರ್ಪಿನ ವಿರುದ್ಧ ಮ್ಹಾಲಕರು ಅಪೀಲು ಮಾಡಿದ್ದರು. ಅಪೀಲಿನಲ್ಲಿ ಈ ವಿವಾದವನ್ನು ಪುನರ್ತನಿಖೆ ನಡೆಸಬೇಕೆಂಬ ತೀರ್ಪು ದೊರೆತಿತ್ತು. ಈ

ಮಂಗಳೂರು ಪತ್ರ

ಸಮಯದಲ್ಲೇ ಪ್ರಾಂತ ಪುನರ್ವಿಂಗಡಣೆಯಾಯಿತು. ಮದರಾಸು ಸರಕಾರದ ಮುಂದಿದ್ದ ಈ ವಿವಾದ ಮೈಸೂರು ಸರಕಾರದ ಮುಂದೆ ಬಂತು. ಆದರೆ ಪ್ರಾಂತ ಪುನರ್ವಿಂಗಡನೆಯಾಗಿ ವರುಷ ಒಂದು ಕಳೆದರೂ ಈ ವಿವಾದವನ್ನು ಟ್ರಿಬ್ಯೂನಲ್‌ಗೆ ಒಪ್ಪಿಸದೆ ಸರಕಾರ ಕಾಲಹರಣ ಮಾಡುತ್ತಿದೆ. ಸರಕಾರಕ್ಕೆ ಹಲವು ವಿನಂತಿಗಳನ್ನು ಕಳುಹಿಸಿಯಾಯಿತು. ಪ್ರತಿ ಪ್ರೆಸ್‌ಗಳಿಂದಲೂ ಮಜೂರರು ಮಜೂರ ಮಂತ್ರಿಗಳಿಗೆ ತಂತಿ ಕಳುಹಿಸಿದರು. ಈ ಮೊದಲು ಮಂಗಳೂರಿಗೆ ಬಂದಿದ್ದ ಕಾರ್ಮಿಕ ಸಚಿವ ಶ್ರೀ ವೈಕುಂಠ ಬಾಳಿಗರು ಈ ವಿವಾದವನ್ನು ಕೂಡಲೇ ಟ್ರಿಬ್ಯೂನಲ್‌ಗೆ ಹಾಕುವ ಭರವಸೆ ನೀಡಿದ್ದರು.

ಆ ಬಳಿಕ ತಿಂಗಳು ಮೂರು ಕಳೆದರೂ ಮಂತ್ರಿಗಳ ಭರವಸೆ ಬಾಯಿಮಾತಾಗಿಯೇ ಉಳಿಯಿತು. ಕಳೆದ ನಾಲ್ಕು ವರುಷಗಳಿಂದ ಈ ಕೇಳಿಕೆಗಳ ತೀರ್ಮಾನಕ್ಕಾಗಿ ಕಾದು ಕುಳಿತಿದ್ದ ಈ ಮಜೂರರು ಇದೀಗ ತಾಳ್ಮೆಗೆಟ್ಟಿದ್ದಾರೆ.

ಕಳೆದ ತಾ. 12ರಂದು ಸೇರಿದ ಪ್ರೆಸ್ ಮಜೂರರ "ಕ್ರಿಯಾ ಸಮಿತಿ" ಸರಕಾರದ ಈ ನಿರ್ಲಕ್ಷ್ಯವನ್ನು ಅವಲೋಕಿಸಿ ಸರಕಾರದ ಈ ಮಜೂರ ವಿರೋಧಿ ನೀತಿಯನ್ನು ಪ್ರತಿಭಟಿಸಲು ದಶಂಬರ 11ರಂದು "ಪ್ರತಿಷೇಧ ದಿನ" ಆಚರಿಸಲು ನಿರ್ಧರಿಸಿದ್ದಾರೆ.

ಪ್ರಾಥಮಿಕ ಶಿಕ್ಷಕರ ನಿರ್ಧಾರ

ದ. ಕ. ಜಿಲ್ಲಾ ವಿದ್ಯಾ ಪರಿಷತ್ತು ಕಳೆದ ತಾ. 10ರಂದು ಕಾರ್ಕಳದಲ್ಲಿ ಸೇರಿತ್ತು. ವಿಧಾನ ಪರಿಷತ್ತಿನ ಸದಸ್ಯ ಶ್ರೀ ಎಂ.ಪಿ.ಎಲ್. ಶಾಸ್ತ್ರಿಗಳು ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಣ ಸಚಿವ ಶ್ರೀ ವಿ. ವೆಂಕಟಪ್ಪನವರು ಸಮ್ಮೇಲನದ ಉದ್ಘಾಟನೆ ನಡೆಸಿದರು.

ದ. ಕ. ಜಿಲ್ಲೆಯ ಪ್ರಾಥಮಿಕ ಶಿಕ್ಷಕರ ಮುಂದೆ ಹತ್ತು ಸಮಸ್ಯೆಗಳಿರುವಾಗ, ಅದನ್ನು ಸರಕಾರದ ಗಮನಕ್ಕೆ ತಂದಿದ್ದರೂ, ಈ ಸಮ್ಮೇಲನದ ಉದ್ಘಾಟನೆ ನಡೆಸಿದ ವಿದ್ಯಾ ಸಚಿವರು ಅದರ ಕಡೆಗೆ ಗಮನ ಕೊಡದೆ ಅಧ್ಯಾಪಕ ವೃತ್ತಿಯ ಪವಿತ್ರತೆಯನ್ನೆ ಮತ್ತೂ ಒತ್ತಿ ಹೇಳಿದ್ದರಿಂದ ಅಧ್ಯಾಪಕರಲ್ಲಿ ಸರಕಾರದ ಕಡೆಗೆ ಅತೃಪ್ತಿಯುಂಟಾಗಿದೆ.

ಸಮ್ಮೇಲನದ ದಿನ ಬೆಳಿಗ್ಗೆ ಸೇರಿದ ಪ್ರಾಥಮಿಕ ಅಧ್ಯಾಪಕರ ಸಭೆಯಲ್ಲಿ ಪ್ರಾಥಮಿಕ ಅಧ್ಯಾಪಕರುಗಳ ಅತೃಪ್ತಿ ಒಡೆದು ಕಾಣುತ್ತಿತ್ತು. ಹಂಗಾರ ಕಟ್ಟೆಯ ಶ್ರೀ ಸದಾನಂದ ಹೆಬ್ಬಾರ್ ಇವರು 500 ಮಂದಿ ಅಧ್ಯಾಪಕರುಗಳಿಂದ ಸಹಿ ಮಾಡಲ್ಪಟ್ಟಿದ್ದ "ಸರಕಾರ ಅಧ್ಯಾಪಕರ ಕೇಳಿಕೆಗಳಿಗೆ ಗಮನ ಕೊಡದಿದಿದ್ದರೆ ದಶಂಬರ ತಾ. 14ರಿಂದ ಮುಷ್ಕರ ಹೂಡಬೇಕೆಂಬ ಠರಾವು ತೀವ್ರ ಚರ್ಚೆಗೊಳಗಾಗಿ ಅದನ್ನು ತೀರ್ಮಾನಿಸಲು ಪ್ರಾಥಮಿಕ ಶಿಕ್ಷಕರ ಸಂಘದ ಕ್ರಿಯಾ ಸಮಿತಿಗೆ ಬಿಟ್ಟುಕೊಡಲಾಯಿತು. ಹಾಗೆಯೇ ಕೇರಳದ ಹೊಸ ವಿದ್ಯಾ ಮಸೂದೆಯ ಮಾದರಿಯಲ್ಲಿ ಪ್ರಾಂತದ ಅಧ್ಯಾಪಕರ ರಿಜಿಸ್ಟ್ರಿಯನ್ನು ತಯಾರಿಸಿ ಅದರಂತೆ ನಿಯಮಾವಳಿಗಳನ್ನು ರಚಿಸಬೇಕೆಂಬ ಠರಾವನ್ನೂ ಈ ಸಮ್ಮೇಲನ ಸ್ವೀಕರಿಸಿತು.

—ಶ್ರೀನಿವಾಸ್

ಬೆಂಗಳೂರಿನಲ್ಲಿ ಸೋವಿಯತ್ ಚಿತ್ರೋತ್ಸವ

ನವಂಬರ 19ರಂದು ಬೆಂಗಳೂರು ಪುಟ್ಟಣ್ಣಚೆಟ್ಟಿ ಟೌನ್ ಹಾಲ್‌ನಲ್ಲಿ ಮೂರು ದಿನಗಳ ಸೋವಿಯತ್ ಚಿತ್ರೋತ್ಸವ ಆರಂಭವಾಯಿತು.

ಒಂದೂವರೆ ಸಾವಿರದಷ್ಟು ಜನ ಕುಳಿತುಕೊಳ್ಳಬಹುದಾದ ಸಭಾ ಭವನವು ಸಂಜೆ 6 ಗಂಟೆಯ ಹೊತ್ತಿಗೆ ಅತಿಥಿಗಳಿಂದ ತುಂಬಿತ್ತು. ಬೆಂಗಳೂರು ಭಾರತ ರಷ್ಯಾ ಸಾಂಸ್ಕೃತಿಕ ಸಂಘದ ಉಪಾಧ್ಯಕ್ಷ ಶ್ರೀ ಸಿದ್ದಿಕಿಯವರು ಸಭಿಕರನ್ನು ಸ್ವಾಗತಿಸಿದರು. ಸಚಿವ ಶ್ರೀ ಎಚ್. ಎಸ್. ರುದ್ರಪ್ಪನವರು ಉತ್ಸವವನ್ನು ಉದ್ಘಾಟಿಸಿದರು. ಆಕ್ಯುಪೇಷನಲ್ ಇನ್‌ಸ್ಟಿಟ್ಯೂಟಿನ ಶ್ರೀ ದ್ವಾರಕಾನಾಥರು ಸೋವಿಯತ್ ಚಿತ್ರೋದ್ಯಮದ ಪ್ರಗತಿಯನ್ನು ಕುರಿತು ಭಾಷಣವಿತ್ತರು.

'ದಿ ಗೋಲ್ಡನ್ ಅಂಟೆಲೋಪ್', ಎಂಬ ಕಾರ್ಟೂನ್ ಚಿತ್ರವನ್ನೂ 'ರೋಡ್ ಟು ಲೈಫ್' ಎಂಬ ಕಥಾ ಚಿತ್ರವನ್ನೂ ಪ್ರದರ್ಶಿಸಲಾಯಿತು.

ತಾ. 20ರಂದು ಬೆಳಿಗ್ಗೆ 10 ಗಂಟೆಗೆ, 3 ಗಂಟೆಗೆ, 6 ಗಂಟೆಗೆ ಮತ್ತು 9 ಗಂಟೆಗೆ 'ದಿ ಅನ್‌ಯೂಶ್ವಲ್ ಮ್ಯಾಚ್', 'ರೋಮಿಯೋ ಅಂಡ್ ಜ್ಯೂಲಿಯಟ್', 'ರೋಡ್ ಟು ಲೈಫ್', ಚಿಲ್ಡ್ರನ್ ಇನ್ ಕ್ರೆಮ್ಲಿನ್', 'ಸ್ಟಾಗ್ ಅಂಡ್ ವೂಲ್ಫ್' ಮೊದಲಾದ ಚಿತ್ರಗಳನ್ನು ತೋರಿಸಲಾಯಿತು.

ಬೆಂಗಳೂರಿನ ಜಿಲ್ಲಾ ವಿದ್ಯಾಧಿಕಾರಿಗಳು, ಎಲ್ಲ ಶಾಲೆಗಳ ಮಕ್ಕಳನ್ನೂ ಚಿತ್ರ ಪ್ರದರ್ಶನಕ್ಕೆ ಕರೆದೊಯ್ಯಲು ಅನುಮತಿ ಕೊಟ್ಟಿರುವುದರಿಂದ ಶಾಲಾ ಬಾಲಕ–ಬಾಲಕಿಯರು ಅವರವರ ಶಾಲೆಗಳ ಭಿತ್ತಿ ಪತ್ರಗಳೊಂದಿಗೆ ಬಂದು ಚಿತ್ರಗಳನ್ನು ನೋಡಿ ಸಂತೋಷಪಟ್ಟರು.

ಕೇರಳ ಪಿ.ಎಸ್.ಪಿ. ಕಾಂಗ್ರೆಸ್.... ಗೂಂಡಗಿರಿ

(ಕೊನೇ ಪುಟದಿಂದ)

ಪಿ. ಆರ್. ಕುರುಪ್ ಎಂಬುವರು ಪೋಲೀಸ್ ಅಧಿಕಾರಿಯೊಬ್ಬನನ್ನು ದೊಣ್ಣೆಯಿಂದ ಹೊಡೆದರು. ಆದಾದ ಕೂಡಲೇ ಅವರ ಅನುಯಾಯಿಗಳು ಪೋಲೀಸರ ಮೇಲೆ ಕಲ್ಲು ತೂರಿದರು. ನಿರ್ವಾಹವಿಲ್ಲದೆ ಪೋಲೀಸರು ಲಾಠಿ ಪ್ರಯೋಗಿಸಬೇಕಾಯಿತು; ಅಶ್ರುವಾಯು ಉಪಯೋಗಿಸಲೇ ಬೇಕಾಯಿತು.

—೦—

(೭ನೇ ಪುಟದಿಂದ)

ದ್ಧ ವರ್ತನೆಯ ಪ್ರತಿಯಾಗಿ ಲೇಬರ್‌ಕೋರ್ಟು ಯೋಗ್ಯ ತೀರ್ಪು ಕೊಡುವುದೆಂದೂ, ಹಾಗೂ ಐದು ವರ್ಷದ ಕೈಗಾರಿಕಾ ಒಪ್ಪಂದ ನಡೆದ ಮೇಲೂ ಈ ಕಾರ್ಮಿಕ ದ್ರೋಹಿ ನೀತಿಯನ್ನು ಅನುಸರಿಸುವ ಮಾಲಿಕರ ಮೇಲೆ ನಮ್ಮ ಕಾರ್ಮಿಕ ಇಲಾಖೆ ಹೆಚ್ಚಿನ ಲಕ್ಷ್ಯ ಇಟ್ಟು ಮಾಲಿಕರ ಒಪ್ಪಂದ ಮುರುಕ ಧೋರಣೆಯನ್ನು ನಿಲ್ಲಿಸಬೇಕೆಂದೂ ಕೇಳಿಕೊಳ್ಳುತ್ತೇವೆ.

ಕೋಲಾರ—

೪,೦೦೦ ರೈತರ ಪ್ರಚಂಡ ಸಭೆ

ಬಾಗೇಪಲ್ಲಿ ತಾಲ್ಲೂಕು, ರೈತ ಸಂಘದ ಆಶ್ರಯದಲ್ಲಿ ತಾ|| 14-11-57 ರಲ್ಲಿ ಚೇಳೂರು ಹೋಬಳಿ ಜೋಡಿ ಮುದ್ದಲ ಪಲ್ಲಿ ಎಂಬ ಗ್ರಾಮದಲ್ಲಿ ಕೋಲಾರ ಜಿಲ್ಲಾ ರೈತ ಸಂಘದ ಅಧ್ಯಕ್ಷ ಶ್ರೀ ಎಂ. ಟಿ.ಕೆ. ಗಂಗಿರೆಡ್ಡಿಯವರ ಅಧ್ಯಕ್ಷತೆಯಲ್ಲಿ 4,000 ಜನರ ಭಾರಿ ಬಹಿರಂಗ ಸಭೆ ನಡೆಯಿತು. ಬಾಗೇಪಲ್ಲಿ ತಾಲ್ಲೂಕು ರೈತಸಂಘದ ಅಧ್ಯಕ್ಷರೂ, ಟೌನ್‌ಮುನಿಸಿಪಲ್ ಕೌನ್ಸಿಲ್ ಅಧ್ಯಕ್ಷರೂ ಆದ ಕಾ|| ಎ.ವಿ. ಅಪ್ಪಸ್ವಾಮಿ ರೆಡ್ಡಿ, ಕೋಲಾರ ಜಿಲ್ಲಾ ಕಮ್ಯೂನಿಸ್ಟ್ ಪಾರ್ಟಿ ಪರವಾಗಿ ಎಚ್. ಎಸ್. ರಾಮ ರಾವ್, ಚಿಂತಾಮಣಿ ತಾಲ್ಲೂಕು ರೈತನಾಯಕ ಕೆ. ಎಂ. ಕೃಷ್ಣಾರೆಡ್ಡಿ ಮುಂತಾದ ರೈತ ನಾಯಕರು ಭಾಷಣಗಳನ್ನು ಮಾಡಿದರು. ಮೊದಲು ಜಲಿಬಿಗಾರಿಪಲ್ಲಿ ಗ್ರಾಮ ರೈತಸಂಘದ ಕಾರ್ಯದರ್ಶಿ ಕಾಂ| ವೆಂಕಟರೆಡ್ಡಿಯವರಿಂದ ಕೆಂಪು ಧ್ವಜ ಆರೋಹಣ ಆಗಿ ಸಭೆ ಪ್ರಾರಂಭವಾಯ್ತು. ಗೂಳೂರು ಕಮ್ಯೂನಿಸ್ಟ್ ಪಾರ್ಟಿ ಬುರ ಕಥ ದಳದವರಿಂದ ಕಾಂ. ವೆಂಕಟಸುಬ್ಬರಾವ್ ನಾಯಕತ್ವದಲ್ಲಿ ಕೇರಳ ಮಂತ್ರಿ ಪೇದರೈತು ಎಂಬ ವೈಜ್ಞಾನಿಕ ನಾಟಕದ ಪ್ರದರ್ಶನ ನೆರೆದ ಸಭಿಕರ ಮೆಚ್ಚುಗೆಯನ್ನು ಗಳಿಸಿತು.

ಭೂಸ್ವಾಮಿಗಳ ಅಕ್ರಮ ನಿಲ್ಲಬೇಕು

ಶ್ರೀ ಗಂಗಿರೆಡ್ಡಿಯವರು ಭಾಷಣ ಮಾಡುತ್ತಾ ಆಂಧ್ರದ ಜಮೀನ್ದಾರರು ಜೋಡಿ ಮುದ್ದಲಪಲ್ಲಿ ಗ್ರಾಮದಲ್ಲಿ ಪುಢಾರಿ ಗುಂಪುಗಳಿಂದ ರೈತರ ಮರಗಳೆಲ್ಲವನ್ನೂ ಕಡಿಸುತ್ತಿದ್ದಾರೆ. ರೈತರ ಹೊಲಗಳಲ್ಲಿ ಬೆಳೆಯನ್ನು ಬಲಾತ್ಕಾರವಾಗಿ ತೆಗೆದುಕೊಂಡು ಹೋಗುತ್ತಿದ್ದಾರೆ, ಅಲ್ಲಿಯ ಕದೀಂ ರೈತರನ್ನು ಹೊಲಗಳಿಂದ ಬಿಡಿಸಲು 13, 14 ನಂ ಲೆಕ್ಕಗಳನ್ನು ಅಧಿಕಾರಿಗಳಿಂದ ತಾವು ಸಾಗುವಳಿ ಮಾಡುತ್ತಿದ್ದ ಹಾಗೆ ಬರೆಯಿಸುತ್ತಿದ್ದಾರೆ. ಇದರಿಂದಾಗಿ ವಂಶ ಪಾರಂಪರ್ಯವಾಗಿ ತಲೆಮಾರುಗಳಿಂದ ಅಲ್ಲಿಯೇ ಕದೀಂ ರೈತರಾಗಿ ಉಳಿದುಕೊಂಡು ಬಂದ ರೈತರನ್ನು ಕೇವಲ ಕೂಲಿಗಳಂತೆ ಪರಿಗಣಿಸುವಂತಾಗಿದೆ. ತತ್‌ಫಲವಾಗಿ ಇವರಿಗೆ ಹೊಲವಿಲ್ಲದ ಹಾಗೆ ಮಾಡುವ ಈ ಅನ್ಯಾಯಯುತ ದಬ್ಬಾಳಿಕೆಯ ನೀತಿಯನ್ನು ಸರಕಾರ ಬಹಳ ಶೀಘ್ರವಾಗಿ ಗಮನಕ್ಕೆ ತೆಗೆದುಕೊಳ್ಳಬೇಕು. ಸದರಿ ಜೋಡಿ ಮುದ್ದಪಲ್ಲಿ ಗ್ರಾಮವನ್ನು ಜೋಡಿ ಇನಾಂ ಅಬಾಲಿಷನ್ ಆಕ್ಟ್ ಪ್ರಕಾರ ಸರ್ಕಾರ ಸೇರಿಸಿಕೊಂಡು, ಸರ್ವೆ ಸೆಟಲ್‌ಮೆಂಟ್ ಮಾಡದೆ ಇರುವುದನ್ನು ಸಭೆಯಲ್ಲಿ ಶೀಘ್ರವಾಗಿ ಖಂಡಿಸಲಾಯಿತು. ಕಾಂಗ್ರೆಸ್ ಸರ್ಕಾರ ಜೋಡಿ ಇನಾಂ ಗ್ರಾಮಗಳನ್ನು 4 ವರ್ಷಗಳ ಹಿಂದೆ ಅಬಾಲಿಷ್ ಮಾಡಿದ್ದು ಇನ್ನೂ ಸರ್ವೆ ನಡೆಸದೆ ಇರುವುದಕ್ಕೆ ಪರಬಾರೆ ಮಾಡಲು ಅವಕಾಶ ಕಲ್ಪಿಸಿರುವುದನ್ನು ಶೀಘ್ರವಾಗಿ ಖಂಡಿಸಲಾಯಿತು.

ರೈತ ಸಂಘ ಬಲಪಡಿಸಿರಿ

ಅಪ್ಪಸ್ವಾಮಿರೆಡ್ಡಿ ಗಳುಮಾತನಾಡುತ್ತ, ರೈತ ಸಂಘಗಳನ್ನು ಕಟ್ಟುವ ಅವಶ್ಯಕತೆಯನ್ನು ವಿವರಿಸಿದರು. ಸರ್ಕಾರದ ಅಧಿಕಾರಿಗಳ ನಿರ್ಲಕ್ಷತೆ, ರೆಡ್ ಟೇಪಿಸಂ ಮತ್ತು ರೈತ ದ್ರೋಹಿ ಕಾರ್ಯಗಳನ್ನು ವಿಶದೀಕರಿಸಿ, ಸರ್ಕಾರ ಕೇವಲ ಜಮೀನ್ದಾರರ, ಧನಿಕರ, ಶ್ರೀಮಂತರ ಕೈಗೊಂಬೆ ಎಂದು ನುಡಿದರು. ರೈತರು ಸಂಘಟನೆಯ ಮಹತ್ವವನ್ನರಿತು ಈ ರೈತದ್ರೋಹಿ ಧೋರಣೆಯನ್ನು ಎದುರಿಸಲು ಬಲವಾದ ರೈತ ಸಂಘದ ಆವಶ್ಯಕತೆಯನ್ನು ವಿವರಿಸಿದರು.

ಕಾಂ| ಹೆಚ್. ಎಸ್. ರಾಮರಾವ್, ಕೆ. ಎಂ. ಕೃಷ್ಣಾರೆಡ್ಡಿ ಇವರು ಜಮೀನ್ದಾರರ ಕುಟಿಲ ತಂತ್ರ ನೀತಿ ಗುಂಡಾಗಿರಿಯನ್ನು ತೀವ್ರವಾಗಿ ವಿರೋಧಿಸಿ ಖಂಡಿಸಿದರು. ಚೇಳೂರು ಹೋಬಳಿಯಲ್ಲಿ ಶಾಲೆಗಳಿಲ್ಲದೆ, ಸಣ್ಣ ಕೆರೆಗಳನ್ನು ದುರಸ್ತಿ ಮಾಡದೆ ಇರುವುದನ್ನೂ, ಇಲ್ಲಿಯ ಭೀಕರ ಕ್ಷಾಮದ ತೊಂದರೆಗಳನ್ನು ಹೇಳಿ ಸರ್ಕಾರ ಕೂಡಲೆ ತುರ್ತು ಪರಿಹಾರವನ್ನು ನೀಡಬೇಕೆಂಬ ನಿರ್ಣಯವನ್ನೂ, ಜೋಡಿ ಗ್ರಾಮ ಸರ್ವೆ ಸೆಟಲ್‌ಮೆಂಟ್ ಮಾಡಬೇಕೆಂಬ ನಿರ್ಣಯವನ್ನೂ ಸರ್ವಾನುಮತದಿಂದ ಸ್ವೀಕರಿಸಲಾಯ್ತು. ಚೇಳೂರು ಎಂ. ಮೋರ್ದಿ ಸಾಬ್‌ಗಳ ವಂದನಾರ್ಪಣೆಯೊಡನೆ ಸಭೆ ಮುಕ್ತಾಯವಾಯಿತು.

ಪ್ರಾಂತೀಯ ಸುದ್ದಿ ಸಂಗ್ರಹ

ಚಿಕ್ಕಮಗಳೂರು

ಕರ್ನಾಟಕ ಪ್ರಾಂತಪ್ಲಾಂಟೇಶನ್‌ಕೆಲಸಗಾರರ ಸಮ್ಮೇಳನದ ಪ್ರಚಾರದಂಗವಾಗಿತಾ. 12-11-57ರಂದು ಬಿಕ್ಕೋಡು ಕುಂಡೆ ಮೈದಾನದಲ್ಲಿ ಮಧ್ಯಾಹ್ನ 2 ಘಂಟೆಗೆ ಕಾ|| ಯಂ. ವಿ. ಭಾಸ್ಕರ್‌ರವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು; ಕಾ|| ಸಿ. ಎನ್. ಪೆರುಮಾಳ್ ಮತ್ತಿತರರು ಸಮ್ಮೇಳನದ ಬಗ್ಗೆ ಮಾತಾಡಿ ಪ್ಲಾಂಟೇಶನ್ ಕೆಲಸಗಾರರು ಕೆಂಬಾವುಟದಡಿಯಲ್ಲಿ ಸಂಘಟಿತರಾಗಿ ನಮ್ಮ ಹಕ್ಕುಬಾಧ್ಯತೆಗಳನ್ನು ಪಡೆಯಲು ಮುಂದಾಗಬೇಕೆಂದರು.

ಹೊಸೂರು

12—11—57ರಂದು ಸಾಯಂಕಾಲ 6 ಘಂಟೆಗೆ ಹೊಸೂರಲ್ಲಿ ಕಾ|| ಪಿ. ಕೇಶವ ಮೇಸ್ತ್ರಿಯವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಕಾ|| ಯಂ. ವಿ. ಭಾಸ್ಕರ್ ಕಾ|| ಸಿ. ಎನ್. ಪೆರುಮಾಳ್ ಮತ್ತಿತರರು ಮಾತಾಡಿ ಸಮ್ಮೇಳನವನ್ನು ಯಶಸ್ವಿ ಮಾಡುವುದಲ್ಲದೆ ಮುಂದೆ ಕಾರ್ಮಿಕರ ಮೇಲೆ ಬೀಳುವ ಹೊರೆ ಮತ್ತು ಉತ್ತಮ ಜೀವನವನ್ನು ನಡೆಸಲು ನಮ್ಮಲ್ಲಿ ಬಲವಾದ ಐಕ್ಯತೆಯನ್ನು ಕಟ್ಟಬೇಕೆಂದು ಕೇಳಿಕೊಂಡರು. ಸಮ್ಮೇಳನದಲ್ಲಿ ಸಾವಿರ ಸಂಖ್ಯೆಯಲ್ಲಿ ಬಂದು ಅಣಿಯಾಗಬೇಕೆಂದು ಕೇಳಿಕೊಂಡರು. ಬಳಿಕ ಘೋಷಣೆಗಳೊಂದಿಗೆ ಸಭೆ ಮುಕ್ತಾಯವಾಯಿತು.

ಉಡುಪಿ

ನೇಕಾರರ ಸಾರ್ವತ್ರಿಕ ಮುಷ್ಕರ

ಕಳೆದ ತಾ. 22—10—57ರಿಂದ ರಜಾ ಸಂಬಳದ ಹಕ್ಕಿಗಾಗಿ ಐದು ಫ್ಯಾಕ್ಟರಿಗಳಲ್ಲಿ ಈಗಾಗಲೇ ಮುಷ್ಕರ ಹೋರಾಟ ನಡೆಯುತ್ತಿದೆ. ವಿವಾದವು ಇನ್ನೂ ಇತ್ಯರ್ಥವಾಗದ್ದರಿಂದ ಮತ್ತು ಕಳೆದ ಒಂದು ವರ್ಷದಿಂದ ನೇಕಾರರು ಕೇಳುತ್ತಾ ಬಂದಿರುವ ಮೂಲ ಕೇಳಿಕೆಗಳಾದ ಮಜೂರಿ ಹೆಚ್ಚಳದ ಪ್ರಶ್ನೆ, ತಲಾ ಎರಡು ತಿಂಗಳಂತೆ ಬೋನಸ್ ಎಂಬಿವೇ ಮೊದಲಾದ ಕೇಳಿಕೆಗಳ ಇತ್ಯರ್ಥವು ಇನ್ನೂ ಆಗದೇ ಇದೆ. ತಾ. 10-11-'57ರಂದು ಜರಗಿದ ಉಡುಪಿ ತಾಲೂಕು ನೇಕಾರರ ಸಂಘದ ಮಹಾಸಭೆಯು ಈ ಬಗ್ಗೆ ಬಹಳ ಗಂಭೀರವಾಗಿ ಚರ್ಚಿಸಿ ಈಕೇಳಿಕೆಗಳನ್ನು ಪಡೆಯಲು ಸಾರ್ವತ್ರಿಕ ಮುಷ್ಕರ ಹೂಡಲು ನಿರ್ಧರಿಸಿರುತ್ತದೆ. ಈ ಸಾರ್ವತ್ರಿಕ ಮುಷ್ಕರವನ್ನು ಯಶಸ್ವಿಗೊಳಿಸಲು ವಿವಿಧ ಪ್ರದೇಶಗಳಲ್ಲಿ ಸಭೆ ಮತ್ತು ಪ್ರದರ್ಶನಗಳನ್ನು ಜರಗಿಸಲು ಕಾರ್ಯಕ್ರಮ ಹಾಕಿದ್ದು ಚಳುವಳಿಯು ಭರದಿಂದ ನಡೆಯುತ್ತಿದೆ.

ಓದುಗರ ಓಲೆ

ಸ್ವಾಮಿ,

ಹೊಸಕೋಟೆ ತಾಲೂಕು ಬಿದರಹಳ್ಳಿ ಹೋಬಳಿ 'y' ಟ್ಯಾಂಕ್ ಆಸರೆಯ ಶ್ರೀ ಎಲೆಮಲಪ್ಪ ಶೆಟ್ಟರ ಕೆರೆ ಆಸರೆಯ ಸಾಗುವಳಿ ರೈತರುಗಳು ಬಹಳನಿರಾಶರಾಗಿ ಕಷ್ಟದಲ್ಲಿರುತ್ತಾರೆ. ಶ್ರೀಎಲೆಮಲಪ್ಪ ಶೆಟ್ಟರ ಕೆರೆ ನೀರನ್ನು ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್‌ಗೆ (ಫ್ಯಾಕ್ಟರಿಗೆ) ತೆಗೆದುಕೊಳ್ಳುತ್ತಿರುತ್ತಾರೆ. ಇದರಿಂದಾಗಿ ಈ ಆಸರೆಯಿಂದ ಜೀವನಮಾಡುವ ರೈತರಿಗೆಲ್ಲಾ ಮುಸ್ಕಿ ಫಸಲೂ ಇಲ್ಲದೆ, ಭತ್ತದ ಫಸಲೂ ಇಲ್ಲದೆ, ಶೀಘ್ರಮುಗ್ಗಟ್ಟಿನ ಪರಿಸ್ಥಿತಿ ಹುಟ್ಟಿಕೊಂಡಿದೆ. ಸರಕಾರ ಕೂಡಲೇ ಗಮನವಿಟ್ಟು ಕೆರೆನೀರನ್ನು ಸಾಗುವಳಿಗೆ ಬಿಟ್ಟು, ರೈತರ ಕಷ್ಟವನ್ನು ಪರಿಹರಿಸುವರೇ?

'ನೊಂದ ರೈತರು'

[ಈ ಅನ್ಯಾಯದ ಬಗ್ಗೆ ಪದೇಪದೇ ಸರ್ಕಾರಕ್ಕೆ ತಿಳಿಸಿದ್ದಾಗ್ಯೂ, ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾಗ್ಯೂ, ಕಾಂಗ್ರೆಸ್ ಸರ್ಕಾರದ ಈ ಮೌನ ಕ್ರೌರ್ಯದ ಪ್ರತೀಕವಾಗಿದೆಯೆನ್ನದೆ ವಿಧಿಯಿಲ್ಲ. ಈ ಅನ್ಯಾಯ ಇನ್ನೂ ಮುಂದುವರಿಯಬೇಕೇ? —ಸಂ.]

ಹಾಸನ

ಕಾಡುಮನೆ ಎಸ್ಟೇಟಿನಲ್ಲಿ ಹಲವಾರು ವರುಷಗಳಿಂದ ಕೆಲಸ ಮಾಡುತ್ತಿರುವ ಶ್ರೀ ಕೃಷ್ಣ ಮತ್ತು ಆತನ ಪತ್ನಿ ಇವರಿಬ್ಬರನ್ನೂ ಅನ್ಯಾಯವಾಗಿ 1957ರ ಮಾರ್ಚಿಯಿಂದ, ಕೆಲಸದಿಂದ ತೆಗೆದು ಹಾಕಲಾಗಿದೆ. ಇವರ ತಪ್ಪು ಕಾರ್ಮಿಕ ಸಂಘದಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸಿದುದೇ ಆಗಿದೆ.

ಬೆಂಗಳೂರಿನ ಲೇಬರ್ ಕೋರ್ಟಿನಲ್ಲಿ ಈ ವಿವಾದವನ್ನು ಒಪ್ಪಿಸಲಾಗಿದೆ. ಇಲ್ಲಿ ನಿಷ್ಪಕ್ಷವಾಗಿ ನ್ಯಾಯ ದೊರಕಿಸಿಕೊಡಲಾಗುವುದೆಂದು ನಾವು ನಂಬಿದ್ದೇವೆ. ಈ ಬಗ್ಗೆ ಸೂಕ್ತವಾದ ಸಂಬಂಧಪಟ್ಟ ಕಾಗದಪತ್ರಗಳನ್ನು ಕೋರ್ಟಿನ ಮುಂದೆ ಹಾಜರು ಪಡಿಸಲು ಸಂದರ್ಭ ಒದಗಿಸಬೇಕೆಂದು, ಕೇಳಿಕೊಳ್ಳಲಾಗಿದೆ. ಕಳೆದ ಮಾರ್ಚಿ ತಿಂಗಳಿನಿಂದಲೇ ಪರಿಗಣಿಸಿ, ಇವರನ್ನು ನೌಕರಿಯಲ್ಲಿಟ್ಟುಕೊಳ್ಳಬೇಕು. ಅಲ್ಲದೆ ತಗಲಿದ ಖರ್ಚನ್ನು ಮಾಲಿಕರು ಕೊಡುವಂತಾಗಬೇಕೆಂದು ಪಿರ್ಯಾದಿಯು ಅರ್ಜಿಯಲ್ಲಿ ಕೇಳಿಕೊಂಡಿದ್ದಾನೆ.

ಮಾಲಿಕರ ಈ ರೀತಿಯ ನ್ಯಾಯ ವಿರು

(೩ನೇ ಪುಟ ನೋಡಿ)

ಎದ್ದೇಳು ರೈತಾಪಿ

ಎದ್ದೇಳು ರೈತಾಪಿ !
ಓ ಪ್ರಚಂಡ ಪ್ರತಾಪಿ !
ಇಂದೇಳು ರೈತಾಪಿ ! || ಪ. ||

o o o

ಕೇಳ್ ಮಣ್ಣಿನ ಕುವರ
ಮುಂದಿದೆ ಬವರ !
ಸಲ್ಲದು ಮೌನವು ಎದ್ದೇಳು !
ನಿನಗಿದೆ ಬಲವು !
ನಿನ್ನದೆ ಹೊಲವು !
ಒಂದಾಗಿ ಪಡೆಯಲು ಇಂದೇಳು !

o o o

ನೀನ್ ದೇಶದ ಬೆನ್ ಮೂಳೆ !
ನಿನ್ನುದುರದಿ ಹಸಿವಿನ ಜ್ವಾಲೆ !
ಅಂಗಾಂದಿ ಗೈಮ್ಯೆಯ ಶೂಲೆ !
ಇದ ತೊಡೆಯಲು ಇಂದು
ನಡುಕಟ್ಟಿಲೊ ಬಂಧು
ಅಂತಿಮ ವಿಜಯವು ನಿನಗೇ
ಸಿಂಧು !

o o o

ಧಣಿಗಾಗಿ ನಿನ್ನದು ದುಡಿತ
ಸಹಿಸುವೆ ಒಡೆಯನ ಒದೆತ !
ನೀ ದಬ್ಬಾಳಿಕೆ ಭಂಗಿಸಿ ಎದ್ದೇಳು !
ಹಂಗನು ನೀಡುತ
ದಾಸ್ಯವ ಕಳಚುತ
ನೇಗಿಲ ಯೋಗಿಯೆ ಎದ್ದೇಳು !

o o o

ಸೇರೆಲೊ ನೀನು ರೈತರ ಕೂಟ
ಮುನ್ನಿದೆ ಸಾಗದು ಧಣಿಯರ ಆಟ
ಬಾ ಕುಡುಗೋಲ ಬಾವುಟ
ಹಿಡಿದೇಳು
ಸಂಘದ ಶಕುತಿಯ ತೋರೇಳು !
ಪ್ರತಿಗಾಮಿಯ ತಡೆಯನು
ಮೀರೇಳು !
ಎದುರಾದ ವೈರಿಯ ತರಿದೇಳು !

"ಗೋಪಾಲ್"

ಸೋವಿಯತ್ ಒಕ್ಕೂಟವು ಮೊದಲನೆಯ ಮಾನವ ನಿರ್ಮಿತ ಭೂ ಉಪಗ್ರಹವನ್ನು ಹಾರಿಸಿದುದನ್ನು ಪ್ರಪಂಚದ ಪ್ರಗತಿಶೀಲ ಜನತೆಯು ಉತ್ಸಾಹಪೂರ್ವಕವಾಗಿ ಸ್ತಂಭೀಭೂತವಾಗಿ ಸ್ವಾಗತಿಸಿದರು. ವಿಶ್ವಾಂತರಿಕ್ಷದ ವಿಜಯಾರಂಭವಿದು ಎಂದು ಈ ಮಹಾ ಸಾಧನೆಯ ಮೌಲ್ಯ ನಿರ್ಣಯವನ್ನು ಮಾಡಲಾಯಿತು. ಮೊದಲನೆಯ ಉಪಗ್ರಹವನ್ನು ಹಾರಿಸಿ ಕೇವಲ ೨೯ ದಿನಗಳಾದ ತರುವಾಯ, ಎರಡನೆಯ ಕೃತಕ ಉಪಗ್ರಹವನ್ನು ಹಾರಿಸಲಾಗಿದೆ. ವಿಭಿನ್ನ ವೈಜ್ಞಾನಿಕ ಉಪಕರಣಗಳನ್ನೂ ಮತ್ತು ಪ್ರಯೋಗಾರ್ಥ ಪ್ರಾಣಿಯೊಂದನ್ನೂ ಒಳಗೊಂಡಿದ್ದ ಎರಡನೆಯ ಕೃತಕ ಉಪಗ್ರಹವನ್ನು ಜಯಪ್ರದವಾಗಿ ಹಾರಿಸಿ ಸೋವಿಯತ್ ವಿಜ್ಞಾನಿಗಳು ವಿಶ್ವಾಂತರಿಕ್ಷದ ಮತ್ತು ವಾತಾವರಣದ ಉನ್ನತ ಸ್ತರಗಳ ಪರಿಶೀಲನೆಗಳನ್ನು ವಿಸ್ತರಿಸುತ್ತಿದ್ದಾರೆ; ಬ್ರಹ್ಮಾಂಡದಲ್ಲಿ ನಡೆಯುತ್ತಿರುವ, ಇದುವರೆಗೆ ನಮಗೆ ತಿಳಿಯದಿರತಕ್ಕ, ಪ್ರಾಕೃತಿಕ ವಿಶೇಷ ಘಟನೆಗಳು ಇನ್ನು ಮೇಲೆ ಮಾನವರಿಗೆ ಹೆಚ್ಚು ಹೆಚ್ಚಾಗಿ ತಿಳಿಯುವಂತಾಗಿಸಿದ್ದಾರೆ.

ನಂಬಲಾರೆವು-ನಂಬಲಸಾಧ್ಯ !

ಒಂದಾದ ಕೆಲವೇ ದಿನಗಳಲ್ಲಿ ಅರ್ಧ ಟನ್ ಭಾರವಿರುವ ಈ ಎರಡನೇ 'ಸ್ಪೂತ್ನಿಕ್'ನ್ನು ಗಂಟೆಗೆ 18,000 ಮೈಲು ವೇಗದಲ್ಲಿ 950 ಮೈಲು ಉತ್ತರಕ್ಕೆ ರಷ್ಯಾ ಹಾರಿಸಿದೆ. ಈಗ ಅದು ಮೊದಲನೆ 'ಸ್ಪೂತ್ನಿಕ್'ನಿಂದ, ಮೇಲಿನ ಮಟ್ಟದಲ್ಲಿ ಭೂಮಿಯ ಸುತ್ತ ಹಾರುತ್ತಿದೆ. ಈ ಉಪಗ್ರಹ ಹಾಗೂ ರಾಕೆಟ್ಟುಗಳನ್ನು ಅಂತರ್ರಾಷ್ಟ್ರೀಯ ಭೂಭೌತಿಕ ವರ್ಷದ ಅವಧಿಯಲ್ಲಿ ಯೋಜನೆಯ ಪ್ರಕಾರ ಭೂಮಿಯ ನಾನಾ ಕೇಂದ್ರಗಳಿಂದ ಹಾರಿಸಲಾಗುವುದು. ರಷ್ಯಾ ಈ ಅವಧಿಯಲ್ಲಿ ನೂರಕ್ಕೂ ಮಿಕ್ಕಿ ರಾಕೆಟ್‌ಗಳನ್ನು ಬಿಡಲು ವ್ಯವಸ್ಥೆ ಮಾಡಿದೆ. ಆದರೆ ಈಉಪಗ್ರಹಗಳನ್ನು ಹಾರಬಿಟ್ಟದ್ದು ಅಸಾಧರಣವಾದ ಪ್ರಯತ್ನ.

ಅದೂ ಅಮೆರಿಕವು ಇನ್ನೂ ಇದುವರೆಗೆ ನಿರ್ಮಿಸದಿರುವ ಉಪಗ್ರಹ "ವಾನ್‌ಗಾರ್ಡ್"–ನ್ನು ಸಮೀಪಿಸುವುದರ ಸಲುವಾಗಿ ಅವರು ರಚಿಸಿಕೊಂಡಿರುವ ಉಪಕರಣಗಳಿಂದ ಅಮೆರಿಕದ ವಿಜ್ಞಾನಿಗಳು ಸೋವಿಯತ್ ಭೂ–ಉಪಗ್ರಹವನ್ನು, ಅದರ ಜಾಡನ್ನನುಸರಿಸಿ ವೀಕ್ಷಿಸಲು ಪ್ರಯತ್ನಿಸುತ್ತಿರುವಾಗ, ರಷ್ಯಾದ ಈ ಮಹಾ ಸಾಧನೆ ಅಮೇರಿಕನರಿಗೆ ದಂಗುಬಡಿಸುವಂತಿದೆ. ನಂಬಲಾರೆವು, ನಂಬಲಸಾಧ್ಯವೆಂದು ಅಮೆರಿಕಾ ಪ್ರತಿಕ್ರಿಯೆ ತೋರಿದೆ.

ನಾಯಿಯನ್ನು ಕೂರಿಸಿ ಕಳುಹಿಸಿಸಿದ ಈಉಪಗ್ರಹವು ಭೂಮಿಯ ಮೇಲ್ಮೈಯ ಮೇಲೆ ಸುಮಾರು 1,700 ಕಿಲೋಮೀಟರುಗಳ (1,063ಮೈಲಿ)ಔನ್ನತ್ಯದಲ್ಲಿಮೊಟ್ಟಮೊದಲನೆಯ ಸಲ, ಈಗ ಉಷ್ಣೋಗ್ರತೆಯ ಮತ್ತು ವಾತಾವರಣದ ಒತ್ತಡದ ದಾಖಲೆಯನ್ನು ಪಡೆಯಲು ಸಾಧ್ಯಗೊಳಿಸಿದೆ.

ಬಾನುಲಿಯ ದೂರಮಾಪಕ ವ್ಯವಸ್ಥೆ ಅಂತರಿಕ್ಷ ಯಾನದಲ್ಲಿರತಕ್ಕ ಸಜೀವಿಯ ಪರಿಸ್ಥಿತಿಯನ್ನು ಕುರಿತು, ನಿಶ್ವಾಸೋಚ್ಛ್ವಾಸ, ಹೃದಯ ಕ್ರಿಯೆ, ಇವುಗಳ ಬಗ್ಗೆ

ಸ್ಪೂತ್ನಿಕ್ ಮಾನವನ ಬ್ರಹ್ಮಾಂಡ ಪ್ರವಾಸಕ್ಕೆ ಹಾದಿ ತೋರಿದೆ !

ನಿರಂತರ ಮಾಹಿತಿಯನ್ನು ಈ ಔನ್ನತ್ಯಗಳಲ್ಲಿ ಪ್ರಪಂಚದ ಸುತ್ತಲೂ ಅನೇಕ ಪರಿಭ್ರಮಣಗಳನ್ನು ಮಾಡುತ್ತಿರುವ ಪ್ರಥಮ ಸಾಹಸ ಯಾತ್ರೆಯನ್ನು ಮಾಡುತ್ತಿರುವ, ನಾಯಿಯ ಬಗ್ಗೆ ಒದಗಿಸುತ್ತಿದೆಯಾದುದರಿಂದ ಮಾನವನ ಅಂತರಿಕ್ಷ ಪ್ರಯಾಣದ ಸಮಸ್ಯೆಗಳನ್ನು ಬಗೆಹರಿಸುವ ದಿಶೆಯಲ್ಲಿ ಈಗ ಇನ್ನೊಂದು ಹೆಜ್ಜೆ ಹಾಕಲಾಗಿದೆ. ಇದರಲ್ಲಿ ಕಳುಹಿಸಲಾಗಿದ್ದ ಲೈಕಾ ಎಂಬ ನಾಯಿಯು ಕೆಲವು ದಿನಗಳವರೆಗೆ ಆರೋಗ್ಯವಾಗಿದ್ದು ಈಗ ಮೃತಿಯನ್ನೈದಿದರೂ ವಿಜ್ಞಾನಿಗಳಿಗೆ ಇದರಿಂದ ಅತ್ಯಮೂಲ್ಯ ಲಾಭವಾಗಿದೆ.

ಹೊಸಯುಗದಾರಂಭ !

ವಿಶ್ವವನ್ನೇ ದಿಗ್ಭ್ರಮೆಗೊಳಿಸಿದ, ಸೋವಿಯತ್ ವಿಜ್ಞಾನಿಗಳ ಈ ಮಹತ್ಸಾಧನೆಗಳು ಪ್ರಪಂಚದಲ್ಲೆ ಹೊಸ ಯುಗವನ್ನು ಪ್ರಾರಂಭಿಸಿರುವುದು ಸ್ವಾಭಾವಿಕವೇ ಆಗಿದೆ. ಕಟ್ಟುನಿಟ್ಟಾದ ವೈಜ್ಞಾನಿಕ ಬುನಾದಿಗಳ ಮೇಲೆ ಆಧಾರಪಟ್ಟು, ವಿಜ್ಞಾನ ಮತ್ತು ಯಂತ್ರಕಲೆಗಳ ಅಭಿವೃದ್ಧಿಯ ಸಲುವಾಗಿ ಅತ್ಯಂತ ಅನುಕೂಲಕರವಾದ ಪರಿಸ್ಥಿತಿಗಳನ್ನು ನಿರ್ಮಿಸಿರತಕ್ಕ ಸಮಾಜವಾದೀ ವ್ಯವಸ್ಥೆಯ ಸ್ವರೂಪದಿಂದಲೇ ಇದು ಸಾಧ್ಯವಾಗಿದೆ. ಸೋವಿಯತ್ ಕಾಲಾವಧಿಯಲ್ಲಿ ಸೋವಿಯತ್ ಒಕ್ಕೂಟದ ಕಾರ್ಮಿಕರ ಮತ್ತು ರೈತರ ಅನುಭವವು ಮಹತ್ತರವಾಗಿ ಅಭಿವೃದ್ಧಿಯಾಗಿದೆ. ಉನ್ನತ ಮತ್ತು ವಿಶಿಷ್ಟ ಮಾಧ್ಯಮಿಕ ಶಿಕ್ಷಣವನ್ನು ಪಡೆದ 63 ಲಕ್ಷ ತಜ್ಞರು ರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯಲ್ಲಿ ಉದ್ಯೋಗವನ್ನು ಪಡೆದಿದ್ದಾರೆ. 1913ರಲ್ಲಿ ಎರಡು ಲಕ್ಷಕ್ಕಿಂತಲೂ ಕಡಮೆ ಜನ ಮಾತ್ರವೇ ಉದ್ಯೋಗಸ್ಥರಾಗಿದ್ದರು. ಶಿಕ್ಷಣ ಕ್ಷೇತ್ರದಲ್ಲಿ ನಡೆದ ಈ ಒಂದು ಕ್ರಾಂತಿಕಾರಕ ಬದಲಾವಣೆಯೇ ರಷ್ಯಾ ವೈಜ್ಞಾನಿಕ ಕ್ಷೇತ್ರದಲ್ಲಿ ಪಾಶ್ಚಿಮಾತ್ಯರನ್ನು ಸೋಲಿಸಲು ಕಾರಣವಾಗಿದೆ

ಸೋವಿಯತ್ ಒಕ್ಕೂಟದಲ್ಲಿ ಇಂಜಿನಿಯರ ದೊಡ್ಡ ಪ್ರಮಾಣದ ತರಬೇತಿನ ಬಗ್ಗೆಹೇಳುವುದಾದರೆ 1950ರಲ್ಲಿ 36,000 ಜನ ಪದವೀಧರರಾಗಿದ್ದೆಡೆಯಲ್ಲಿ, 1956ರಲ್ಲಿ 71,000 ಜನರು ಪದವೀಧರರಾಗಿದ್ದಾರೆ. ಅಮೆರಿಕದ ಸಂಯುಕ್ತ ರಾಜ್ಯಗಳಲ್ಲಿ ಇದೇ ಅವಧಿಯಲ್ಲಿ ಉತ್ತೀರ್ಣರಾದ ಇಂಜಿನಿಯರಿಂಗ್ ಪದವೀಧರರ ಸಂಖ್ಯೆಯು 53,000 ದಿಂದ 26,000 ಕ್ಕಿಳಿಯಿತು. ಸೋವಿಯತ್ ವಿಜ್ಞಾನದ ಮಹತ್ಸಾಧನೆಗೆ-ಒಕ್ಕೂಟ ಮತ್ತು ಸ್ವಾಯತ್ತ ಪ್ರಜಾತಂತ್ರಗಳಲ್ಲಿ ಅದರ ವಿಜ್ಞಾನ ವಿಕಾಸವೂ, ಹಾಗೂ ವೈಜ್ಞಾನಿಕ ಸಂಶೋಧನೆಯಲ್ಲಿ ವಿನ್ಯಾಸ ಕೇಂದ್ರಗಳ ಮತ್ತು ಕಾರಖಾನೆಯ ಪ್ರಯೋಗ ಶಾಲೆಗಳ ಸಿಬ್ಬಂದಿಯ ಜನರು ಭಾಗವಹಿಸುತ್ತಿದ್ದಾರೆಂಬ ವಾಸ್ತವಾಂಶವೂ, ಪ್ರೋತ್ಸಾಹವನ್ನಿತ್ತ ಮುಖ್ಯಾಂಶವಾಗಿದೆ.

ಸೋವಿಯತ್ ಸರ್ಕಾರದ ನಲವತ್ತು ವರ್ಷಗಳಲ್ಲಿ ಸೋವಿಯತ್ ವಿಜ್ಞಾನವು ಪ್ರಬುದ್ಧವಾಗಿದೆ, ಬಲಪಟ್ಟಿದೆ ಮತ್ತು ಇತ್ತೀಚಿನವರೆಗೂ ಮಾನವನಿಗೆ ಸಾಧ್ಯವಾಗದ ವಿಷಯವೆಂದೆಣಿಸಲಾಗಿದ್ದ ಅತ್ಯಂತ ಜಟಿಲ ಕಾರ್ಯಭಾರಗಳನ್ನು ಬಗೆಹರಿಸಲು ಸಮರ್ಥವಾಗಿದೆ. ಸೋವಿಯತ್ ರಷ್ಯಾದ ಈ ವಿಜ್ಞಾನಾಭಿವೃದ್ಧಿಯು, ಬಂಡವಾಳವಾದಿ ಸಮಾಜ ವ್ಯವಸ್ಥೆಯ ಮೇಲೆ ಸಮಾಜವಾದೀ ವ್ಯವಸ್ಥೆಯ ಮಹೋತ್ತಮ ಜಯವನ್ನೂ, ಸೋವಿಯತ್ ಒಕ್ಕೂಟದ ಐತಿಹಾಸಿಕ ಯಶಸ್ಸನ್ನೂ ಮತ್ತು ಕಮ್ಯೂನಿಸ್ಟ್ ಪಾರ್ಟಿಯ ವಿವೇಕ ಪೂರ್ಣವಾದ ನಾಯಕತ್ವವನ್ನೂ ಸ್ಪಷ್ಟವಾಗಿ ಚಿತ್ರಿಸುತ್ತದೆ.

ಸ್ಪೂತ್ನಿಕ್ ಮಾನವ ಸಮಾಜದ ಬ್ರಹ್ಮಾಂಡ ವಿಜಯಕ್ಕೆ ಹಾದಿ ತೋರಿದಂತೆ, ಈ ಸಾಧನೆಯನ್ನು ಸಾಧಿಸಿದ ಸಮಾಜವಾದೀ ವ್ಯವಸ್ಥೆಯುಮಗುದೊಮ್ಮೆ ಮಾನಕೋಟಿಯ ಕಲ್ಯಾಣದ ಹಾದಿ ಯಾವುದು ಎಂಬುದನ್ನು ತೋರಿಸಿ ಕೊಟ್ಟಿದೆ.

ಚಂದ್ರನ ಸುತ್ತಲೂ ತಿರುಗುವ ಉಪಗ್ರಹ

ಚಂದ್ರಗ್ರಹದ ಸುತ್ತೂ ತಿರುಗುತ್ತ, ಭೂಮಿಯಿಂದ ಕಾಣಲಾಗದ ಚಂದ್ರಮಂಡಲದ ಭಾಗದ ಛಾಯಾ ಚಿತ್ರವನ್ನು ತೆಗೆಯುವುದರ ಸಲುವಾಗಿಯೇ ಒಂದು ಉಪಗ್ರಹವನ್ನು ಬೇಗನೆ ರಚಿಸಲಾಗುವುದು. ಇದನ್ನು ಸೋವಿಯತ್ ಒಕ್ಕೂಟದ ವಿಜ್ಞಾನ ಶಾಸ್ತ್ರ ಪರಿಷತ್ತಿನ ಪತ್ರವ್ಯವಹಾರ ಸದಸ್ಯರೂ, ಸುಪ್ರಸಿದ್ಧ ನಕ್ಷತ್ರ-ಸಸ್ಯ ಶಾಸ್ತ್ರಜ್ಞರೂ ಆದ ಗವ್ರಿಯಲ್ ಡೀ–ಖೋವ್‌ರವರು, ದ್ವಿತೀಯ ಮಾನವ ನಿರ್ಮಿತ ಭೂ–ಉಪಗ್ರಹದ ಹಾರಿಸುವಿಕೆಯ ಬಗ್ಗೆ ವ್ಯಾಖ್ಯೆ ಮಾಡುತ್ತಾ ತಿಳಿಸಿದರು.

—o—

15ವರ್ಷಗಳಲ್ಲಿ ರಷ್ಯಾದ ಔದ್ಯೋಗಿಕ ಪ್ರಗತಿ ಅಮೆರಿಕಾವನ್ನು ಮೀರಿಸುವುದು !

೧೯೫೭ರಲ್ಲಿ ಸೋವಿಯತ್ ಒಕ್ಕೂಟದ ಒಟ್ಟು ಔದ್ಯೋಗಿಕ ಹುಟ್ಟುವಳಿಯು,—೧೯೧೩ರದರೊಂದಿಗೆ ಹೋಲಿಸಿ ನೋಡಿದಲ್ಲಿ, ೩೩ ಪಾಲು ವೃದ್ಧಿಯಾಗಿದೆ. ಉತ್ಪಾದನೆಯ ಉಪಕರಣಗಳ ಹುಟ್ಟುವಳಿಯು ೭೪ ಪಾಲು ಮೇಲೇರಿತು. ವಸ್ತುತಃ, ೨೦–೨೨ ವರ್ಷಗಳಲ್ಲಿ ಈ ಮಹತ್ತರ ಔದ್ಯೋಗಿಕಾಭಿವೃದ್ಧಿಯನ್ನು ಸಾಧಿಸಲಾಯಿತು.

ಕೈಗಾರಿಕೆಯು ವಿಶೇಷತಃ ಭಾರೀ ಕೈಗಾರಿಕೋದ್ಯಮವು, ಸೋವಿಯತ್ ಒಕ್ಕೂಟದಲ್ಲಿ ಸಾಧಿಸಲಾದ ಪ್ರಮಾಣದಲ್ಲಿ ಅಭಿವೃದ್ಧಿಗೊಂಡ ಉದಾಹರಣೆಗಳು ಯಾವುವೂ ಇತಿಹಾಸಕ್ಕೆ ತಿಳಿದಿಲ್ಲವೆಂದು ಹೇಳಬಹುದು. ಅಮೆರಿಕದ ಸಂಯುಕ್ತ ರಾಜ್ಯಗಳಿಗೂ, ಜರ್ಮನಿಗೂ ಮತ್ತು ಬ್ರಿಟನ್ನಿಗೂ, ತಮ್ಮ ಔದ್ಯೋಗಿಕ ಉತ್ಪಾದನೆಯ ಮೊತ್ತವನ್ನು ಹೆಚ್ಚು ಕಡಿಮೆ ಮೂವತ್ತು ಪಾಲು ವೃದ್ಧಿಗೊಳಿಸಲು ೮೦ರಿಂದ ೧೫೦ ವರ್ಷಗಳು ಬೇಕಾದುವು. ಔದ್ಯೋಗಿಕ ಉತ್ಪಾದನೆಯ ಸಮಗ್ರ ಮೊತ್ತಗಳ ಮಟ್ಟಿಗೆ ಹೇಳುವುದಾದರೆ, ಸೋವಿಯತ್ ಒಕ್ಕೂಟವು ಯೂರೋಪಿನ ಅತ್ಯಂತ ದೊಡ್ಡ ಬಂಡವಾಳವಾದೀ ದೇಶಗಳನ್ನು,—ಬ್ರಿಟನ್, ಫ್ರಾನ್ಸ್ ಮತ್ತು ಪಶ್ಚಿಮ ಜರ್ಮನಿ ದೇಶಗಳನ್ನು,–ದೀರ್ಘ ಕಾಲದಿಂದಲೂ ಮೀರಿಸಿ ಮುಂದೆ ಸಾಗಿದೆ.

ಶ್ರಾಮಿಕ ಉತ್ಪಾದಕತೆಯಲ್ಲಿ ಸೋವಿಯತ್ ಒಕ್ಕೂಟವು ಈಗಾಗಲೇ ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳನ್ನು ಮೀರಿಸಿಬಿಟ್ಟಿದೆ ಮತ್ತು ಈಗ ಅಮೆರಿಕದ ಸಂಯುಕ್ತ ರಾಜ್ಯಗಳ ಮಟ್ಟವನ್ನು ಮುಟ್ಟಲು ಕಾರ್ಯಪ್ರವೃತ್ತವಾಗಿದೆ. ೧೯೧೩ರೊಂದಿಗೆ ಹೋಲಿಸಿ ನೋಡಿದರೆ, ಸೋವಿಯತ್ ಕೈಗಾರಿಕೋದ್ಯಮದಲ್ಲಿ ಶ್ರಾಮಿಕ ಉತ್ಪಾದಕತೆಯು ಪ್ರತಿ ವರ್ಷವೂ ಹೆಚ್ಚುಕಡಿಮೆ ಒಂಬತ್ತೂವರೆ ಪಾಲು ವೃದ್ಧಿಯಾಯಿತು. ಅಮೆರಿಕ ಸಂಯುಕ್ತ ರಾಜ್ಯಗಳಲ್ಲಿ ಅದು ೨–೩ ಪಾಲು ಮಾತ್ರವಷ್ಟೇ ವೃದ್ಧಿಯಾಯಿತು

ಹೆಚ್ಚುಕಡಿಮೆ ೧೫ವರ್ಷಗಳಲ್ಲಿ, ರಷ್ಯಾದ ವಾರ್ಷಿಕ ಔದ್ಯೋಗಿಕ ಹುಟ್ಟುವಳಿಯು ಕೆಳಗಿನ ಮಟ್ಟಗಳನ್ನು ಸಾಧಿಸಿಕೊಳ್ಳಲಾಗುವುದು. ಆ ಮಟ್ಟಗಳಾವುವೆಂದರೆ: ಕಬ್ಬಿಣದ ಅದಿರು–೨೫ ಕೋಟಿಯಿಂದ ೩೦ ಕೋಟಿ ಟನ್ನುಗಳ ವರೆಗೆ, ಬೀಡು ಕಬ್ಬಿಣಗಳು,–೭·೫ರಿಂದ ೮·೫ ಕೋಟಿ ಟನ್‌ಗಳು, ಉಕ್ಕು ೧೦ರಿಂದ ೧೨ ಕೋಟಿ ಟನ್‌ಗಳು, ಕಲ್ಲಿದ್ದಲು ೬೫ರಿಂದ ೭೫ ಕೋಟಿ ಟನ್ನುಗಳು, ಎಣ್ಣೆ ೩೫ರಿಂದ ೪೦ ಕೋಟಿ ಟನ್ನುಗಳು, ಅನಿಲ ೨೭,೦೦೦ದಿಂದ ೩೨,೦೦೦ ಕೋಟಿ ಘನ ಮೀಟರುಗಳು, ವಿದ್ಯುಚ್ಛಕ್ತಿ ೮೦,೦೦೦ದಿಂದ ೯೦,೦೦೦ ಕೋಟಿ ಕಿಲೋವಾಟ್ ಗಂಟೆಗಳು, ಸಿಮೆಂಟ್ ೯ ಕೋಟಿಯಿಂದ ೧೧ ಕೋಟಿ ಟನ್ನುಗಳು, ಸಕ್ಕರೆ ೯೦ ಲಕ್ಷದಿಂದ ೧ ಕೋಟಿ ಟನ್ನುಗಳು, ಉಣ್ಣೆ ಬಟ್ಟೆಗಳು ೫೫ರಿಂದ ೬೫ ಕೋಟಿ ಮೀಟರುಗಳು, ಚರ್ಮದ ಪಾದರಕ್ಷೆಗಳು ೬೦ರಿಂದ ೭೦ ಕೋಟಿ ಜತೆಗಳು. ಇದು ಸಾಧಿಸಲ್ಪಟ್ಟಲ್ಲಿ ಅಮೆರಿಕವನ್ನು ಮೀರಿಸಿ ರಷ್ಯಾ ಔದ್ಯೋಗಿಕ ಪ್ರಗತಿಯನ್ನು ಸಾಧಿಸಿ, ಬಂಡವಾಳವಾದಿ ವ್ಯವಸ್ಥೆಯ ಮೇಲೆ ಸಮಾಜವಾದಿ ಪದ್ಧತಿಯ ಜಯವನ್ನು ಸಾರುವುದು.

ಕರ್ನಾಟಕ ರೈತ ಸಮ್ಮೇಳನದ ನಿರ್ಣಯಗಳು

ಬೇಸಾಯಗಾರ ಒಕ್ಕಲುಗಳ ರಕ್ಷಣೆಗೆ

1. ಯಾವ ಕಾರಣದಿಂದಲೂ ಒಕ್ಕಲು ತಪ್ಪಿಸುವುದನ್ನು ಕೂಡಲೇ ನಿಷೇಧಿಸಬೇಕು.

2. 1952ರ ನಂತರ ಒಕ್ಕಲು ತಪ್ಪಿಸಿರುವುದನ್ನೂ ಒಕ್ಕಲುಗಳು ತಾವಾಗಿ ಜಮೀನು ಬಿಟ್ಟುಕೊಟ್ಟಿರುವುದನ್ನೂ ರದ್ದುಗೊಳಿಸಿ, ಒಕ್ಕಲುಗಳಿಗೆ ಜಮೀನನ್ನು ವಾಪಾಸು ಕೊಡಿಸಬೇಕು.

3. ಭೂಮಾಲಕರ ಜಮೀನನ್ನು ಗೇಣಿಗೆ ಅಥವ ಉತ್ಪತ್ತಿಯ ಪಾಲಿಗೆ ವಹಿಸಿಕೊಂಡು ಬೇಸಾಯ ಮಾಡುವ ಎಲ್ಲರನ್ನು ಒಕ್ಕಲುಗಳು ಎಂದು ಪರಿಗಣಿಸಬೇಕು. ಹಾಗು ಅವರಿಗೆಲ್ಲ ಶಾಶ್ವತವಾದ ಒಕ್ಕಲುತನದ ಹಕ್ಕನ್ನು ಕೊಡಬೇಕು.

4. $13\frac{1}{3}$ ಎಕ್ರೆಗಿಂತ ಹೆಚ್ಚು ಜಮೀನಿರುವ ಭೂಮಾಲಿಕನಾಗಲಿ, ಆದಾಯ ತೆರಿಗೆ, ಮಾರಾಟ ತೆರಿಗೆ ಅಥವ ವೃತ್ತಿತೆರಿಗೆ ಕೊಡುವ ಭೂಮಾಲಕನಾಗಲಿ, ಯಾವ ಕಾರಣದಿಂದಲೂ ಒಕ್ಕಲುಗಳಿಂದ ಜಮೀನನ್ನು ವಶಪಡಿಸಿಕೊಳ್ಳಲು ಅವಕಾಶ ನಿಷೇಧಿಸಲ್ಪಡಬೇಕು. $13\frac{1}{3}$ ಎಕ್ರೆಗಿಂತ ಕಡಿಮೆ ಜಮೀನಿರುವ ಭೂಮಾಲಕರು, ಅವರು ಈಗಾಗಲೆ ಸ್ವಂತ ಸಾಗುವಳಿಗೆ ಸ್ವಾಧೀನ ಇಟ್ಟುಕೊಂಡಿರುವ ಜಮೀನಿನ ಸಹಿತವಾಗಿ, ಒಟ್ಟು 5 ಎಕ್ರೆ ತರಿ ಅಥವ ಅದಕ್ಕೆ ಸಮಾನವಾಗುವಷ್ಟು ಖುಷ್ಕಿ ಜಮೀನನ್ನು ಮಾತ್ರ ಒಕ್ಕಲುಗಳಿಂದ ಸ್ವಂತ ಸಾಗುವಳಿಗೆ ವಾಪಾಸು ಪಡೆಯಲು ಅವಕಾಶ ಕೊಡಬಹುದು. ಅಂಥ ಸಂದರ್ಭಗಳಲ್ಲೂ ಒಕ್ಕಲಿನ ವಶದಲ್ಲಿರುವ ಜಮೀನಿನ ಅರ್ಧಾಂಶಕ್ಕಿಂತ ಕಡಿಮೆಯಾಗದಷ್ಟನ್ನು ಒಕ್ಕಲಿಗೆನೆ ಬಿಡಬೇಕು. ಅಲ್ಲದೆ, ಹಾಗೆ ಒಕ್ಕಲಿಗೆ ಬಿಡುವ ಭಾಗವು ಒಕ್ಕಲೆ ಆರಿಸಿಕೊಳ್ಳುವುದಾಗಿರಬೇಕು.

5. ಯಾವ ಭೂಮಾಲಕನನ್ನಾದರೂ ಸ್ವಂತ ಸಾಗುವಳಿದಾರನೆಂದು ಪರಿಗಣಿಸಬೇಕಾದರೆ, ಅವನು ಜಮೀನಿರುವ ಗ್ರಾಮದಲ್ಲಾಗಲೀ ನೆರೆಗ್ರಾಮದಲ್ಲಾಗಲಿ ವಾಸವಿರುವವನಾಗಿದ್ದು, ಬೇಸಾಯದ ಸಂಪೂರ್ಣ ಲಾಭನಷ್ಟಕ್ಕೆ ಹೊಣೆಗಾರನಾಗಿದ್ದು, ಬೇಸಾಯದ ಮೇಲ್ವಿಚಾರಣೆ ನೋಡುವವನೂ ಸ್ವತಃ ಶ್ರಮಪಡುವವನೂ ಆಗಿರತಕ್ಕದ್ದು.

6. ಯಾವ ಕಾರಣದಿಂದಲೂ ವಸತಿ—ವಠಾರಗಳಿಂದ ಯಾರನ್ನೂ ತಪ್ಪಿಸಕೂಡದು.

7. ಪರಮಾವಧಿ ಗೇಣಿಯು ಒಟ್ಟು ಉತ್ಪತ್ತಿಯ $\frac{1}{6}$ ಭಾಗಕ್ಕಿಂತ ಹೆಚ್ಚು ಇರಬಾರದು.

(4ನೇ ಪುಟ ನೋಡಿ)

★ ರೈತರ ಹಿತಸಾಧಿಸಲು ರಾಜ್ಯವ್ಯಾಪಿ ರೈತ ಸಂಘಟನೆ ಬೆಳೆಯಲಿ ★

(7ನೇ ಪುಟದಿಂದ)

ಜತ್ತಿ ಸಮಿತಿಯ ಈ ಶಿಫಾರಸುಗಳು ಜಾರಿಗೆ ಬಂದರೆ ಒಕ್ಕಲು ಎಬ್ಬಿಸುವುದಕ್ಕೆ, ಗೇಣಿ ಒಕ್ಕಲುಗಳನ್ನು ಭೂರಹಿತ ಕೂಲಿಗಾರರಾಗಿ ಮಾಡುವುದಕ್ಕೆ ಧಾರಾಳ ಅವಕಾಶ ಕೊಡುವುದು. ಒಕ್ಕಲುಗಳಿಂದ ಜಮೀನು ವಶಪಡಿಸಿಕೊಳ್ಳುವ ಭೂಮಾಲಕರು ಜಮೀನಿನಿಂದ 10 ಮೈಲಿ ದೂರದಲ್ಲಿದ್ದು, ಬೇಸಾಯದ ಲಾಭನಷ್ಟದ ಹೊಣೆ ವಹಿಸಿದರೆ ಸಾಕು. ಇದರಿಂದ ಬೇಸಾಯಗಾರರಲ್ಲದ ಭೂಮಾಲಿಕರ ವರ್ಗವನ್ನು ಬಲಪಡಿಸಿದಂತಾಗುವುದು.

ಗೇಣಿಯ ವಿಚಾರದಲ್ಲೂ ಜತ್ತಿ ಸಮಿತಿಯು ಮಾಡಿರುವ ಶಿಫಾರಸು ಅನ್ಯಾಯದ್ದಿದೆ. ಬೊಂಬಯಿ ಗೇಣಿ ಶಾಸನದಲ್ಲಿ ಗೇಣಿಯು ಒಟ್ಟು ಉತ್ಪತ್ತಿಯ $\frac{1}{6}$ ಭಾಗಕ್ಕಿಂತ ಹೆಚ್ಚು ಇರಬಾರದು ಎಂಬ ನಿಯಮವಿದೆ. ಅದು ಪ್ರಯೋಗಕ್ಕೆ ಬಂದಿಲ್ಲವಾದರೆ ಅದಕ್ಕೆ ಆಡಳಿತಾಂಗದ ಭೂಮಾಲಿಕ ಪಕ್ಷಪಾತತನವೇ ಕಾರಣ. ಜತ್ತಿ ಸಮಿತಿಯು ಆ ನಿಯಮವನ್ನೂ ಗಾಳಿಗೆ ತೂರಿದೆ. ಗೇಣಿಯು ನೀರಾವರಿಯಿರುವ ಜಮೀನಿಗೆ ಒಟ್ಟು ಉತ್ಪತ್ತಿಯ $\frac{1}{4}$ರಷ್ಟೆಂದೂ ನೀರಾವರಿಯಿಲ್ಲದ ಜಮೀನಿಗೆ ಒಟ್ಟು ಉತ್ಪತ್ತಿಯ $\frac{1}{5}$ರಷ್ಟೆಂದೂ ಜತ್ತಿ ಸಮಿತಿಯು ಶಿಫಾರಸು ಮಾಡಿದೆ.

ಪರಿಮಿತಿಗಿಂತ ಹೆಚ್ಚಿನ ಜಮೀನನ್ನು ಸರಕಾರ ವಶಪಡಿಸುವಾಗ ಜಮೀನ್ದಾರರಿಗ ಪರಿಹಾರ ಕೊಡಲಾಗುವುದಷ್ಟೆ? ಆ ಬಗ್ಗೆ ಜತ್ತಿ ಸಮಿತಿಯ ಶಿಫಾರಸು ಹೀಗಿದೆ: ಪರಿಹಾರವು ನಿವ್ವಳ ಆದಾಯದ 15 ರಷ್ಟಿರಬೇಕು. ಗೇಣಿಗೆ ಕೊಟ್ಟಿರುವ ಜಮೀನಾದರೆ, ನಿವ್ವಳ ಆದಾಯವನ್ನು ಗೇಣಿಯಿಂದ ಕಂದಾಯವನ್ನು ಕಳೆದು ಉಳಿಯುವ ಅಂಶವೆಂದು ಪರಿಗಣಿಸಬೇಕು. ನಿವ್ವಳ ಆದಾಯವನ್ನು ಲೆಕ್ಕ ಮಾಡುವುದಕ್ಕೂ, ಗೇಣಿಯನ್ನು ನಿರ್ಣಯಿಸುವುದಕ್ಕೂ ಸಮಿತಿಯು ಶಿಫಾರಸು ಮಾಡಿರುವ ಪ್ರಕಾರ ಈ ಪರಿಹಾರವು ಹೆಚ್ಚೆಂದೇ ಹೇಳಬೇಕಾಗುತ್ತದೆ. ಅಲ್ಲದೆ ಪರಿಹಾರವನ್ನು ಕಂತುಗಳಲ್ಲಿ ಕೊಡುವಾಗ ಶೇ. $4\frac{1}{2}$ ಯಷ್ಟು ಬಡ್ಡಿ ಕೂಡಿಸಿ ಕೊಡಬೇಕೆಂದು ಸಮಿತಿಯು ಶಿಫಾರಸು ಮಾಡಿರುವುದು ಸಮಂಜಸವಲ್ಲ. ಬಡ್ಡಿಯು ಶೇ. 3 ಕ್ಕಿಂತ ಹೆಚ್ಚಿರಬಾರದು. ಪರಿಹಾರ ಧನವನ್ನು ಸಂಪೂರ್ಣವಾಗಿ ಜಮೀನ್ದಾರರಿಗೆ ಕೊಟ್ಟು ತೀರಿಸುವ ತನಕ ಜಮೀನಿನ ಒಡೆತನವು ರೈತನಿಗೆ ಸಿಗಲಾರದೆನ್ನುವುದು ನ್ಯಾಯವಲ್ಲ. ಒಂದು ನಿಶ್ಚಿತ ದಿನದಿಂದ ರೈತನು ಜಮೀನಿನ ಮಾಲಕನಾಗಬೇಕು. ಅವನಿಂದ ಪರಿಹಾರವನ್ನು ಒಂದೇ ಗಂಟಿನಲ್ಲೋ, ಕಂತುಗಳಲ್ಲೋ ಸರಕಾರ ಪಡೆಯಬೇಕು. ಜಮೀನ್ದಾರರಿಗೆ ಪರಿಹಾರ ಕೊಡುವ ಜವಾಬ್ದಾರಿಯನ್ನು ಸರಕಾರವೇ ವಹಿಸಿಕೊಳ್ಳಬೇಕು. ಪರಿಹಾರವು ದೊಡ್ಡ ಹಾಗು ಸಣ್ಣ ಭೂಮಾಲಿಕರಿಗೆಲ್ಲ ಒಂದೇ ದರದಲ್ಲಿರಬಾರದು. ಕೇರಳದ ಕಾಯಿದೆಯ ಕರಡಿನಲ್ಲಿ ಸೂಚಿಸಿರುವಂತೆ ಜಮೀನ್ದಾರರನ್ನು 100 ಎಕ್ರೆಗಿಂತ ಹೆಚ್ಚು ಇರುವವರು, 50ರಿಂದ 100 ಎಕ್ರೆ ಇರುವವರು, 25ರಿಂದ 50 ಎಕ್ರೆ ಇರುವವರು, 10ರಿಂದ 25 ಎಕ್ರೆ ಇರುವವರು, 5ರಿಂದ 10 ಎಕ್ರೆ ಇರುವವರು 5 ಎಕ್ರೆಗಿಂತ ಕಡಿಮೆ ಇರುವವರು, ಎಂದು ವಿಂಗಡಿಸಬೇಕು. ಕೆಳಗಿನ ಹಂತದವರಿಗೆ ಹೆಚ್ಚುಹಾಗು ಮೇಲೆ ಮೇಲಿನ ಹಂತಗಳವರಿಗೆ ಕಡಿಮೆ-ಕಡಿಮೆ ದರಗಳಲ್ಲಿ ಪರಿಹಾರ ಕೊಡುವ ಕ್ರಮವನ್ನು ಅನುಸರಿಸುವುದು ನ್ಯಾಯ ಮತ್ತು ಯೋಗ್ಯ. ರೈತರಿಂದ ಒಂದೇ ಪ್ರಮಾಣದಲ್ಲಿ ಪರಿಹಾರವನ್ನು ಸಂಗ್ರಹಿಸಿ ಜಮೀನ್ದಾರರಿಗೆ ಮೇಲೆ ಸೂಚಿಸಿದಂತೆ ಹಂತ—ಹಂತವಾದ ದರದಲ್ಲಿ ಪರಿಹಾರವನ್ನು ಕೊಡುವ ಕ್ರಮವನ್ನು ಸರಕಾರ ಅನುಸರಿಸಬೇಕು.

ಕೆಲವು ತರದ ಜಮೀನುಗಳಿಗೆ ಪರಿಮಿತಿಯಿಂದ ವಿನಾಯಿತಿ ಕೊಡುವುದಕ್ಕೆ ಜತ್ತಿಸಮಿತಿಯು ಶಿಫಾರಸು ಮಾಡಿದೆ. ಹಾಗೆ ವಿನಾಯತಿ ಕೊಡುವುದರಿಂದ, ಪರಿಮಿತಿಯ ನಿಯಮ ಅನ್ವಯಿಸದಂತೆ ತಪ್ಪಿಸಿಕೊಳ್ಳಲು ಭೂಮಾಲಕರಿಗೆ ಅವಕಾಶ ಕೊಟ್ಟಂತಾಗುವುದು.

ಭೂಶಾಸನವನ್ನು ಜಾರಿಗೊಳಿಸುವ ಅಧಿಕಾರವನ್ನು ಕೇವಲ ಅಧಿಕಾರಿಗಳ ಕೈಗೆ ಒಪ್ಪಿಸಿದರೆ, ರೈತರಿಗೆ ಅನುಕೂಲವಾಗುವ ನಿಯಮಗಳು ಪರಿಣಾಮಕಾರಿಯಾಗಿ ಜಾರಿಗೆ ಬರಲಾರವು. ಆದುದರಿಂದ ಶಾಸನವನ್ನು ಜಾರಿಗೊಳಿಸುವುದರಲ್ಲಿ ರೈತ ಸಂಘಟನೆಗಳಿಗೆ ಅಧಿಕೃತ ಪ್ರಾತಿನಿಧ್ಯವನ್ನು ಕೊಡಬೇಕು.

ಸಂಘಟನೆ ಬಲಗೊಳಿಸಿರಿ

ಜತ್ತಿ ಸಮಿತಿಯ ವರದಿಯು ವಿಧಾನ ಸಭೆಯಲ್ಲಿ ಚರ್ಚಿಸಲ್ಪಟ್ಟಾಗ ಈವರೆಗೆ ಮಾತನಾಡಿದವರಲ್ಲಿ ಹೆಚ್ಚಿನವರು ಪ್ರಗತಿಶೀಲವಾದ ಟೀಕೆಗಳನ್ನೇ ಮಾಡಿದ್ದಾರೆ. ಆದರೆ ಭೂಸುಧಾರಣೆಯನ್ನೇ ವಿರೋಧಿಸುವ ಶಕ್ತಿಗಳು ಶಾಸನಕರ್ತರಲ್ಲಿ, ಸರಕಾರದೊಳಗೆ, ಬಲವಾಗಿಯೇ ಇವೆ ಎನ್ನುವುದೂ ಕಂಡು ಬಂದಿದೆ. ಪ್ರಾಂತದ ಆದ್ಯಂತವಾಗಿ ಭೂಮಾಲಕರು ಭೂಶಾಸವಾಗದಂತೆ ತಡೆಯುವುದಕ್ಕೆ ಶತಪ್ರಯತ್ನ ಮಾಡುತ್ತಿದ್ದಾರೆ.

ಇಂಥ ಸಂದರ್ಭದಲ್ಲಿ ಪ್ರಗತಿಶೀಲವಾದ ಭೂಶಾಸನವನ್ನು ಕೂಡಲೇ ಮಂಜೂರು ಮಾಡಿ ಜಾರಿಗೆ ತರುವಂತೆ ಶಾಸನ ಕರ್ತರನ್ನೂ ಸರಕಾರವನ್ನೂ, ಒತ್ತಾಯಿಸುವ ರಾಜ್ಯವ್ಯಾಪಕವಾದ, ಸುಶಕ್ತವಾದ, ಚಳುವಳಿಯನ್ನು ನಡೆಸುವುದು ನಮ್ಮ ಕರ್ತವ್ಯವಾಗಿದೆ. ಇಂದಿನ ಪರಿಸ್ಥಿತಿಯಲ್ಲಿ ಈ ಚಳುವಳಿಯು ವಿಶಾಲವಾದ ಐಕ್ಯತೆಯ ಆಧಾರದಲ್ಲಿ ನಡೆಯಲು ಸಾಧ್ಯವಿದೆ; ಖಂಡಿತವಾಗಿ ಯಶಸ್ವಿಯಾಗಲು ಸಾಧ್ಯವಿದೆ;

ಆದರೆ ಕರ್ನಾಟಕದಲ್ಲಿ ರೈತ ಸಂಘಟನೆಯಿನ್ನೂ ಆರಂಭ ದೆಶೆಯಲ್ಲಿದೆ ಎನ್ನುವುದನ್ನು ನಾವು ಮರೆಯಬಾರದು. ಕಳೆದ ಹಲವಾರು ವರ್ಷಗಳಿಂದ ಕರ್ನಾಟಕದ ವಿವಿಧ ಭಾಗಗಳಲ್ಲಿ ರೈತ ಚಳುವಳಿಗಳು ನಡೆಯುತ್ತಿವೆ. ಆದರೆ ಈ ಚಳುವಳಿಗಳೆಲ್ಲ ಪರಸ್ಪರ ಸಂಬಂಧವಿಲ್ಲದೆ, ಕೇಂದ್ರೀಕರಣವಿಲ್ಲದೆ, ಸ್ಥಳೀಯವಾಗಿ ಉಳಿದಿದೆ. ಕೆಲವು ಪ್ರದೇಶಗಳಲ್ಲಿ ಒಮ್ಮೆ ಬಲವತ್ತಾಗಿ ಬೆಳೆದಿದ್ದ ರೈತ ಸಂಘಟನೆಗಳು ಇತ್ತೀಚೆಗೆ ಬಲಕುಂದಿಹೋಗಿವೆ. ಅದೇ ಸಮಯದಲ್ಲಿ ಕೆಲವು ಪ್ರದೇಶಗಳಲ್ಲಿ ರೈತ ಸಂಘಟನೆಗಳು ಬಲಹೊಂದಿರುತ್ತವೆ. ಇತ್ತೀಚೆಗೆ ಪ್ರಾಂತದ ವಿವಿಧ ಪ್ರದೇಶಗಳಲ್ಲಿ ರೈತ ಸಂಘಟನೆಗಳು ಹೊಸತಾಗಿ ಹುಟ್ಟಿರುತ್ತವೆ. ಪ್ರಾಂತದ ನಾನಾ ಪ್ರದೇಶಗಳಿಂದ ಬಂದು ಕಲೆತಿರುವ ನಾವು, ಅಖಿಲ ಕರ್ನಾಟಕ ರೈತ ಸಂಘಟನೆಯನ್ನು ಸ್ಥಾಪಿಸಿ, ಏಕೀಕೃತವಾಗಿ ಪ್ರಯತ್ನಿಸಿದಲ್ಲಿ ಬಹಳ ಬೇಗನೆ ರಾಜ್ಯವ್ಯಾಪಿಯಾದ ಹಾಗೂ ಬಲವಾದ ರೈತ ಸಂಘಟನೆಯನ್ನು ಕಟ್ಟಲು ಸಾಧ್ಯವಿದೆ.

ರೈತರ ಹಾಗು ಸಮಗ್ರ ಜನತೆಯ ಮುಂದಿರುವ ಮಹತ್ವದ ಸಮಸ್ಯೆಗಳನ್ನು ಬಗೆಹರಿಸಲು ರೈತಸಂಘ ಪ್ರಯತ್ನಿಸುವುದು. ಕನ್ನಡ ನಾಡಿನ ಪ್ರಗತಿಗೆ, ರಾಷ್ಟ್ರದ ಅಭಿವೃದ್ಧಿಗೆ. ಜನಜೀವನದ ಸರ್ವತೋಮುಖ ಏಳಿಗೆಗೆ, ಬುನಾದಿಯಾಗಿ ವಿಶಾಲವಾದ ಮತ್ತು ಬಲವಾದ ರೈತ ಸಂಘಟನೆಯನ್ನು ಕಟ್ಟಲು ಕಾರ್ಯಕ್ರಮ ವಹಿಸುವುದು ಎಂದು ಹಾರೈಸುತ್ತೇವೆ.

ಕೇರಳದಲ್ಲಿ ಕಾಂಗ್ರೆಸ್—ಪಿ.ಎಸ್.ಪಿ. ರಾಜಕೀಯ ಗೂಂಡಾಗಿರಿ !

ನವಂಬರ ತಾ. 11ರಂದು ಕಣ್ಣಾನೂರಿನ ಸಮೀಪದ ಕಟ್ಟೆರಪಳ್ಳಿ ಎಂಬಲ್ಲಿ, ಕಾಂಗ್ರೆಸ್ ಮತ್ತು ಪಿ.ಎಸ್.ಪಿ. ನೇತೃತ್ವದಲ್ಲಿ ನಡೆದ ಹಿಂಸಾತ್ಮಕ ಪ್ರದರ್ಶನವೊಂದನ್ನು ಚದರಿಸಲು ಅಧಿಕಾರಿಗಳು ಬಲಪ್ರಯೋಗ ಮಾಡಬೇಕಾಯಿತು.

ಕೇರಳದ ಕಮ್ಯೂನಿಸ್ಟ್ ಸರಕಾರವು, ವಸತಿಯಿಲ್ಲದ ಹರಿಜನರಿಗೆ ವಸತಿಗಳನ್ನು ಏರ್ಪಡಿಸಿ ಕೊಡುವುದಕ್ಕೆ ಒಂದು ಯೋಜನೆಯನ್ನು ತಯಾರಿಸಿದೆ. ಪ್ರತಿಯೊಂದು ಗ್ರಾಮದಲ್ಲೂ ಸರಕಾರದ ಸ್ವಾಧೀನದಲ್ಲಿರುವ ಜಮೀನಿನ ಕಾಲು ಭಾಗದಷ್ಟನ್ನು ಅದಕ್ಕೋಸ್ಕರ ಮೀಸಲಾಗಿ ಇರಿಸಲಾಗಿದೆ ಸರಕಾರದ ಈ ಯೋಜನೆಯು ಪ್ರಕಟವಾದ ನಂತರ ಪ್ರತಿಯೊಂದು ಗ್ರಾಮದಲ್ಲೂ ತಾಲ್ಲೂಕಿನಲ್ಲೂ ಅದನ್ನು ಕಾರ್ಯಗತಗೊಳಿಸುವುದಕ್ಕೆ ಯೋಗ್ಯ ವ್ಯವಸ್ಥೆಗಳನ್ನು ಮಾಡಲಾಗುತ್ತಿದೆ.

ಸರಕಾರದ ಸೂಕ್ತಕ್ರಮ

ಕೇರಳದಲ್ಲಿ ಕಮ್ಯೂನಿಸ್ಟ್ ಸರಕಾರ ಅಧಿಕಾರಕ್ಕೆ ಬರುವ ಮೊದಲೇ ಸರಕಾರಿ ಜಮೀನನ್ನು ದೊಡ್ಡ ದೊಡ್ಡ ಭೂಮಾಲಿಕರು ಅಕ್ರಮವಾಗಿ ವಶಪಡಿಸಿಕೊಂಡಿದ್ದರು. ಕೆಲವು ಕಡೆಗಳಲ್ಲಿ ಜಮೀನಿಲ್ಲದ ಬಡಜನರೂ ಸರಕಾರಿ ಜಮೀನುಗಳಲ್ಲಿ ವಸತಿಗಳನ್ನು ಏರ್ಪಡಿಸಿಕೊಂಡಿದ್ದರು. ಕಮ್ಯುನಿಸ್ಟ್ ಸರಕಾರ ಅಧಿಕಾರಕ್ಕೆ ಬಂದ ಕೂಡಲೆ, ಸರಕಾರಿ ಜಮೀನಿನಲ್ಲಿ ಮೊದಲೆ ವಸತಿಗಳನ್ನು ಏರ್ಪಡಿಸಿಕೊಂಡಿದ್ದವರನ್ನು ಹೊರಗೆ ಹಾಕಬಾರದೆಂದು ಆಜ್ಞೆ ಹೊರಡಿಸಿತು. ಅಲ್ಲದೆ, ಇನ್ನು ಮುಂದೆ ಯಾರೂ ಸರಕಾರಿ ಜಮೀನನ್ನು ಆಕ್ರಮಿಸಬಾರದಾಗಿ ನಿಷೇಧಿಸಿತು.

ಸರಕಾರದ ವಶದಲ್ಲಿರುವ ಜಮೀನನ್ನೆಲ್ಲ ಕ್ರಮಬದ್ಧವಾಗಿ, ನ್ಯಾಯವಾದ ರೀತಿಯಲ್ಲಿ, ಭೂಮಿಯಿಲ್ಲದವರಿಗೆ ಹಂಚುವ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾದರೆ ಅಕ್ರಮ ಪ್ರವೇಶವನ್ನು ತಡೆಯದಿರಲು ಸಾಧ್ಯವಿಲ್ಲ ಎನ್ನುವುದು ವ್ಯಕ್ತವಿದೆ.

ಈ ಹಿನ್ನೆಲೆಯಲ್ಲಿ 25 ಹರಿಜನ ಕುಟುಂಬಗಳು ಕಟ್ಟೆಂಪಳ್ಳಿಯಲ್ಲಿ ಸರಕಾರಿ ಜಮೀನನ್ನು ಆಕ್ರಮವಾಗಿ ಸ್ವಾಧೀನಪಡಿಸಿದವು. ಕಾಯಿದೆ ಸಚಿವರು ಕುಟುಂಬಗಳವರನ್ನು ಭೇಟಿಯಾಗಿ, ಅವರು ಕಾಯಿದೆಗೆ ವಿರೋಧವಾಗಿ ವರ್ತಿಸುತ್ತಾರೆಂದು ತಿಳಿಸಿದರು; ಆ ಸ್ಥಳವು ಹರಿಜನರ ಸಲುವಾಗಿ ಒಂದು ಕಾಲನಿ ಕಟ್ಟಲು ಆವಶ್ಯವಿದೆಯೆಂದು ವಿವರಿಸಿದರು; ಈ ಯೋಜನೆ ಪೂರ್ತಿಯಾಗುವ ತನಕ ಅವರು ಆ ಸ್ಥಳದಿಂದ ಹೊರಗಿರಬೇಕೆಂದು ಕೇಳಿಕೊಂಡರು.

ಹರಿಜನರ ಹೆಸರಲ್ಲಿ ಆಕ್ರಮಣ

ಇಪ್ಪತ್ತೈದು ಕುಟುಂಬಗಳ ಪೈಕಿ 9 ಕುಟುಂಬಗಳವರನ್ನು ಹೊರತು ಮತ್ತೆಲ್ಲರನ್ನೂ ಒಪ್ಪಿಸಲು ಮಂತ್ರಿಗಳಿಗೆ ಸಾಧ್ಯವಾಯಿತು. ಅವರೆಲ್ಲ ಸರಕಾರದ ಜಮೀನನ್ನು ಬಿಟ್ಟುಕೊಟ್ಟರು. ಬಿಟ್ಟು ಕೊಡಲು ನಿರಾಕರಿಸಿದ ಒಂಭತ್ತು ಕುಟುಂಬಗಳ ಪರಿಚಯವನ್ನು ನಿಮಗೆ ಮಾಡಿಕೊಡುವುದು ಅಗತ್ಯ.

ಈ ಒಂಭತ್ತು ಕುಟುಂಬಗಳ ಪೈಕಿ ಪ್ರತಿಯೊಂದು ಕುಟುಂಬಕ್ಕೂ ಸರಕಾರಿ ಜಮೀನಿನ ಹತ್ತಿರದಲ್ಲೆ ಸ್ವಂತದ ಅಥವ ಗೇಣಿಗೆ ಮಾಡಿಕೊಂಡಿರುವ ಬೇರೆ ಜಮೀನು ವಸತಿಗಳೂ ಇವೆ. ಗೇಣಿಯ ಸ್ಥಳದಿಂದ ಯಾರನ್ನೂ ಹೊರಗೆ ಹಾಕದಂತೆ ಸರಕಾರವು ಹೊರಡಿಸಿರುವ ಆಜ್ಞೆಯಿಂದ ಇವರಿಗೆಲ್ಲ ರಕ್ಷಣೆಯೂ ಸಿಕ್ಕಿದೆ. ಹಾಗಿದ್ದರೂ ಅವರು ಸರಕಾರದ ಜಮೀನನ್ನು ಆಕ್ರಮಿಸಿ, ಹರಿಜನರಿಗೆ ವಸತಿ ಏರ್ಪಡಿಸುವ ಸರಕಾರದ ಯೋಜನೆಗೆ ಆತಂಕ ತಂದಿಟ್ಟಿದ್ದಾರೆ.

ಭೂಸ್ವಾಮಿಗಳ ಕುತಂತ್ರ

ಇದರಲ್ಲಿ ಜಮೀನ್ದಾರರ ಕೈವಾಡ ಸ್ಪಷ್ಟವಾಗಿದೆ. ಜಮೀನ್ದಾರರು ಒಂದೇ ಗೋಲಿಯಿಂದ, ಎರಡು ಹಕ್ಕಿಗಳನ್ನು ಹೊಡೆಯುವ ತಂತ್ರ ಹೂಡಿದ್ದಾರೆ. ಒಕ್ಕಲು ತಪ್ಪಿಸುವುದನ್ನು ನಿಷೇಧಿಸುವ ಸರಕಾರದ ಆಜ್ಞೆಯಿರುವುದರಿಂದ ತಮ್ಮ ಜಮೀನುಗಳಲ್ಲಿ ಒಕ್ಕಲುಗಳಾಗಿರುವ ಹರಿಜನರನ್ನು ಉಪಾಯದಿಂದ ಹುರಿದುಂಬಿಸಿ ಸರಕಾರದ ಜಮೀನಿಗೆ ನೂಕಿ ಕಾಟ ತಪ್ಪಿಸಿಕೊಳ್ಳುವುದು ಒಂದು. ಅಕ್ರಮ ಪ್ರವೇಶವನ್ನು ತಡೆಯುವ ಸರಕಾರದ ವಿರೋಧವಾಗಿ ಬೊಬ್ಬೆಯೆಬ್ಬಿಸಿ ಅಪಕೀರ್ತಿ ಹಬ್ಬಿಸುವುದು ಇನ್ನೊಂದು. ಈ ಇರ್ತಲೆ ಹಾವಿನ ತಂತ್ರ ಹೂಡಿದ ಜಮೀನ್ದಾರರು ಕಾಂಗ್ರೆಸ್ ಭಕ್ತರೆಂದು ಬೇರೆ ಹೇಳಬೇಕಾಗಿಲ್ಲ.

ಮಲಬಾರಿನ ಕರ್ಷಕ ಸಂಘದ ಅಧ್ಯಕ್ಷ ವಿಷ್ಣು ಭಾರತೀಯನ್‌ರವರು ಕಟ್ಟೆಂಪಳ್ಳಿಯಲ್ಲಿ ನಡೆಸಿದ ತನಿಖೆಯಿಂದ ತಿಳಿದುಬಂದಿರುವ ಒಂದು ಸ್ವಾರಸ್ಯದ ವಿಷಯ ಹೀಗಿದೆ: ಸರಕಾರಿ ಸ್ಥಳವನ್ನು ಆಕ್ರಮಿಸಬೇಕೆಂದು ಒಬ್ಬ ಜಮೀನ್ದಾರ ತನ್ನ ಹರಿಜನ ಕೂಲಿಯಾಳಿಗೆ ಆಜ್ಞಾಪಿಸಿದ್ದನ್ನು ಆ ಕೂಲಿಯಾಳು ನಿರಾಕರಿಸಿದ್ದಕ್ಕೆ ಅವನನ್ನು ಕೆಲಸದಿಂದ ತೆಗೆದು ಹಾಕಲಾಗಿದೆ.

ಹರಿಜನರಿಗೆ ವಸತಿ ಏರ್ಪಡಿಸಲು ಸರಕಾರ ವಹಿಸಿರುವ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದೂ, ಅಕ್ರಮ ಪ್ರವೇಶಗಾರರ ತಂತ್ರವನ್ನು ತಡೆಗಟ್ಟಿ ಹರಿಜನರ ನಿಜವಾದ ಹಿತವನ್ನು ರಕ್ಷಿಸಬೇಕೆಂದೂ, ಪ್ರದೇಶದ 120 ಹರಿಜನರು ಸಹಿ ಹಾಕಿ ಸರಕಾರಕ್ಕೆ ಮನವಿ ಮಾಡಿಕೊಂಡಿದ್ದಾರೆ.

ರಾಜಕೀಯ ಪಿತೂರಿ

ಕಾಂಗ್ರೆಸ್ ಮತ್ತು ಪಿ. ಎಸ್. ಪಿ. ನಾಯಕರು ತಮ್ಮ ರಾಜಕೀಯ ಗೂಂಡಾಗಿರಿಗೆ ನೆಪವಾಗಿ ಇಟ್ಟುಕೊಂಡಿರುವ ವಿಷಯ ಇದಾಗಿದೆ.

ಸರಕಾರಿ ಜಮೀನಿನಲ್ಲಿ ಅಕ್ರಮವಾಗಿ ತಳವೂರಿರುವವರು ಹೊರಗೆ ಬಂದರೆ ಅವರಿಗೆ ಬೇರೆ ಸ್ಥಳ ಕೊಡಲಾಗುವುದೆಂದೂ, ಕಟ್ಟೆಂಪಳ್ಳಿಯಲ್ಲಿ ಕಟ್ಟಲಾಗುವ ಕಾಲನಿಯಲ್ಲಿ ಅವರಿಗೂ ವಸತಿಗಳನ್ನು ಕೊಡಲಾಗುವುದೆಂದೂ ಸರಕಾರದ ಕಡೆಯಿಂದ ಕಾಯಿದೆ ಸಚಿವರೂ ಸ್ಥಳೀಯ ಆಡಳಿತ ಸಚಿವರೂ ಬಹಿರಂಗವಾಗಿ ಭರವಸೆ ಕೊಟ್ಟರೂ ರಾಜಕೀಯ ದುರುದ್ದೇಶದಿಂದ ಕೂಡಿರುವ ಕಾಂಗ್ರೆಸ್–ಪಿ. ಎಸ್. ಪಿ ನಾಯಕರು ಕಿವಿಗೊಡಲಿಲ್ಲ. ಎರಡು ತಿಂಗಳ ಕಾಲ! ಈ ಅಕ್ರಮ ಪ್ರವೇಶಗಾರರಿಗೆ ಸಮಾಧಾನ ಹೇಳುವುದರಲ್ಲೂ, ಎಚ್ಚರಿಕೆ ಕೊಡುವುದರಲ್ಲೂ, ಕಳೆಯಿತು. ಆದರೂ ಅವರು ಅಲುಗಾಡಲಿಲ್ಲ. ಕೊನೆಗೆ ಬೇರೆ ಮಾರ್ಗವಿಲ್ಲದುದರಿಂದ ಅವರನ್ನು ಹೊರಗೆ ಹಾಕಬೇಕಾಯಿತು ಅದನ್ನು ತಡೆಯಲು ಪಿ.ಎಸ್.ಪಿಯವರೆಂದು ಹೇಳಲಾಗುವವರು ಸುಮಾರು ಎರಡು ಸಾವಿರ ಜನ ರಾಜ್ಯದ ಎಲ್ಲ ಭಾಗಗಳಿಂದಲೂ ಕಟ್ಟೆಂಪಳ್ಳಿಯಲ್ಲಿ ಬಂದು ನೆರೆದು ಅಧಿಕಾರಿಗಳನ್ನು ಪ್ರತಿಭಟಿಸಿದರು.

ಪಿ.ಎಸ್.ಪಿ. ಶಾಸನ ಸಭಾ ಸದಸ್ಯ

(೬ನೇ ಪುಟ ನೋಡಿ)

ಕಾನೂನಿನ ನ್ಯೂನತೆ ಕಾರಣ

(೧ನೇ ಪುಟದಿಂದ)

ಗಳಲ್ಲಿ ಕಾನೂನಿದ್ದರೂ ಅದನ್ನು ಜಾರಿ ಮಾಡುವ ರೀತಿಯ ಪರಿಣಾಮವಾಗಿ ಭೂಹೀನರಿಗೆ ಭೂಮಿ ಸಿಕ್ಕುತ್ತಿಲ್ಲವೆಂದು ಹೇಳುತ್ತಾ ಶ್ರೀಯುತರು "ಜತ್ತಿ ಸಮಿತಿ ಶಿಫಾರಸಿನ ವಿಷಯದಲ್ಲಿ ಸರಕಾರ ಏನು ಮಾಡುತ್ತೋ ಗೊತ್ತಿಲ್ಲ. ಅದನ್ನು ಕಟ್ಟುನಿಟ್ಟಾಗಿ ಕಾರ್ಯಗತ ಮಾಡಿದರೂ ಭೂಹಂಚಿಕೆ ಸಮಸ್ಯೆ ತೃಪ್ತಿಕರವಾಗಿ ಪರಿಹಾರವಾಗಲಾರದು" ಎಂದು ಅಭಿಪ್ರಾಯಪಟ್ಟರು.


"ಭೂಸುಧಾರಣಾ ಕಾನೂನುಗಳಲ್ಲಿ ನ್ಯೂನತೆಗಳಿರುವುದರಿಂದ ಪರಿಸ್ಥಿತಿ ಹೀಗಾಗಿದೆ. ನ್ಯೂನತೆಗಳ ಪ್ರಯೋಜನವನ್ನು ಭಾರಿ ಭೂಮಾಲೀಕರು ಪಡೆಯುತ್ತಿದ್ದಾರೆ. ಆದುದರಿಂದ ಈ ನ್ಯೂನತೆಗಳನ್ನು ತೆಗೆದು ಪಕ್ವವಾದ ಶಾಸನ ಮಾಡಿದ ಹೊರತು ಭೂ ಸುಧಾರಣೆ ಯಶಸ್ವಿಯಾಗದು" ಎಂದರು.

ಗ್ರಾಮ ಆಡಳಿತದಲ್ಲಿ ರೈತರು ಹೆಚ್ಚು ಆಸಕ್ತಿ ವಹಿಸಬೇಕಾದ ಅಗತ್ಯವನ್ನು ಪ್ರಸ್ತಾಪಿಸಿ ಶ್ರೀ ಪ್ರಸಾದ್ ರಾವ್‌ರವರು ಆಡಳಿತ ವ್ಯವಸ್ಥೆಯಲ್ಲಿ ಗ್ರಾಮ ಪಂಚಾಯಿತಿ ಮುಖ್ಯವೆಂದು ಹೇಳಿ, "ಗ್ರಾಮ ಪಂಚಾಯಿತಿಗಳಿಗೆ ಹೆಚ್ಚಿನ ಅಧಿಕಾರ ನೀಡಿ ಅವುಗಳ ಮೂಲಕ ಆಡಳಿತದಲ್ಲಿ ರೈತರ ಸಹಕಾರ ಪಡೆಯಬೇಕೆಂದು ಸರಕಾರ ಯೋಚಿಸುತ್ತಿದೆ. ಗ್ರಾಮ ಪಂಚಾಯಿತಿಗಳಲ್ಲಿ ಸಾಮಾನ್ಯವಾಗಿ ರೈತರಿಗೆ ಸಂಬಂಧಿಸಿದ ವಿಷಯಗಳು ಚರ್ಚಿಸಲ್ಪಡುತ್ತವೆ. ಆದುದರಿಂದ ರೈತರು ಗ್ರಾಮ ಪಂಚಾಯಿತಿಗಳಲ್ಲಿ ಹೆಚ್ಚು ಆಸಕ್ತಿ ವಹಿಸಬೇಕು. ಭೂಸುಧಾರಣೆ ಕಾನೂನು ಜಾರಿಗೆ ತರುವ ವಿಷಯದಲ್ಲೂ ಗ್ರಾಮ ಪಂಚಾಯಿತಿಗಳಿಗೆ ಅಧಿಕಾರ ಕೊಡಬೇಕೆಂದು ಕೇಳಲಾಗುವುದು. ಬಲವಂತ ರಾಯ್ ಮೆಹತ ಸಮಿತಿ ಕೂಡ ಈ ಶಿಫಾರಸು ಮಾಡಿದೆ. ಆದುದರಿಂದ ರೈತರು ಗ್ರಾಮ ಪಂಚಾಯಿತಿಗಳ ಆಡಳಿತದಲ್ಲಿ ತೀವ್ರ ಆಸಕ್ತಿ ವಹಿಸಬೇಕಾದ್ದು ಅಗತ್ಯ" ಎಂದರು.

ಸಮ್ಮೇಳನಕ್ಕೆ ರಾಜ್ಯದ ನಾನಾ ಭಾಗಗಳಿಂದ ಸುಮಾರು ೨೫೦ ಪ್ರತಿನಿಧಿಗಳು ಬಂದಿದ್ದಾರೆ.

ತಾ|| 17ರಂದು ಸಂಜೆ ಚಿಕ್ಕಲಾಲ್ ಬಾಗಿನಲ್ಲಿ ಶ್ರೀ ಎಂ. ಸಿ. ನರಸಿಂಹನ್, ಎಂ.ಎಲ್.ಎ.ರವರ ಅಧ್ಯಕ್ಷತೆಯಲ್ಲಿ ಬಹಿರಂಗ ಅಧಿವೇಶನ ಜರುಗಿತು. ಅದರ ಮೊದಲು ದೇವಾಂಗ ಛತ್ರದಿಂದ ಪ್ರತಿನಿಧಿಗಳ ಹಾಗೂ ಬೆಂಗಳೂರಿನ ವಿವಿಧ ಕಾರ್ಮಿಕ ಸಂಘಗಳ ಬಂಧುಗಳ ಮೆರವಣಿಗೆ ನಡೆದಿತ್ತು.

ಸಭೆಯಲ್ಲಿ ಶ್ರೀ ಬಿ.ವಿ. ಕಕ್ಕಿಲ್ಲಾಯರು ಸಮ್ಮೇಳನದ ನಿರ್ಣಯಗಳನ್ನು ವಿವರಿಸಿದರು. ಶ್ರೀ ಎ. ಕೃಷ್ಣಶೆಟ್ಟಿ ಮಾತನಾಡುತ್ತಾ ರೈತ ಸಂಘಟನೆಗೆ ಬೆಂಬಲ ಕೋರಿದರು. ಶ್ರೀ ಪ್ರಸಾದರಾಯರು ಪ್ರಥಮ ಪಂಚವಾರ್ಷಿಕ ಯೋಜನೆ ಎಣಿಸಿದಷ್ಟು ಫಲಕಾರಿಯಾಗದಿರುವುದಕ್ಕೂ ದ್ವಿತೀಯ ಯೋಜನೆಯು ಬಿಕ್ಕಟ್ಟಿಗೆ ಸಿಲುಕುವುದಕ್ಕೂ ಭೂಸುಧಾರಣೆ ಆಗದಿರುವುದು ಕಾರಣವೆಂದೂ, ಭೂಸುಧಾರಣೆಯು ಪ್ರಮುಖ್ಯವಾದ ರಾಷ್ಟ್ರೀಯ ಅವಶ್ಯಕತೆಯೆಂದೂ ವಿವರಿಸಿದರು. ಶ್ರೀ ಎಂ. ಸಿ. ನರಸಿಂಹನ್‌ರವರು ಮಾತನಾಡುತ್ತಾ, ಉಳುವವನಿಗೆ ಹೊಲ ದೊರಕಬೇಕೆಂಬ ಘೋಷಣೆ ಫಲಕಾರಿಯಾಗಲು ಯೋಗ್ಯ ಶಾಸನವಾಗಬೇಕು; ಶಾಸನವಾದರೆ ಸಾಲದು, ಬಲವಾದ ಸಂಘಟನೆ ಇರಬೇಕು ಎಂದು ಹೇಳಿದರು. (ಬಾಕಿ ಮುಂದಿನ ವಾರ)



ರೈತ ಸಮ್ಮೇಳನದ ಪ್ರತಿನಿಧಿ ಸಭೆಯ ಒಂದು ದೃಶ್ಯ

REG. No. M. 6867

Edited Printed and Published by C. R. Krishna Rao, at Janashakthi Printers, L—59, K. V. Temple St., Sultanpet Bangalore—2 phone · 3810